# ಶ್ರದ್ಧಾವಾನ್ ಲಭತೇ ಜ್ಞಾನಮ್

(ಶ್ರದ್ಧೆಯುಳ್ಳವನಿಗೆ ಜ್ಞಾನ ಲಭಿಸುತ್ತದೆ)



## ಅಖಿಲ ಭಾರತ ಪತ್ರಿಕೆ

**ಜೂನ್ 2016**

ಬೆಲೆ : 15/-



*What people think, do or say is*
*of little importance. The only thing that*
*counts is your relation with the Divine.*

- The Mother

# ಅಖಿಲ ಭಾರತ ಪತ್ರಿಕೆ

**ಸಂಪಾದಕರು**
ಡಾ॥ ಕೆ.ಎಸ್. ಆಮೂರ
ಎಂ.ಎಸ್‌ಸಿ, ಪಿಎಚ್‌ಡಿ,
ಶಿವಗಿರಿ, ಧಾರವಾಡ – 580 007.
ಫೋನ್ : 0836 – 2774044

**ಪರಿಶೀಲನಾ ಸಮಿತಿ, ಧಾರವಾಡ**
ಡಾ॥ ಗುರುಲಿಂಗ ಕಾಪಸೆ
ಡಾ॥ ಪಾರ್ವತಿ ನಾರಾಯಣರಾವ್
ಡಾ॥ ಸುಶೀಲಾ ಬಳುಂಡಗಿ

**ಡಿ.ಟಿ.ಪಿ**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ :**
ಶೇಷ ಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಕಾಶಕರು :**
ಶ್ರೀ ಅಜಿತ್ ಸಬ್ನೀಸ್,
ಕಾರ್ಯಾಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ, ಕರ್ನಾಟಕ,
"ಶ್ರೀ ಅರವಿಂದ ಮಾರ್ಗ"
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು :**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು–560078.
ಫೋನ್ : 080 – 2244 9882
http://abp.sirinudi.org


## ಪರಿವಿಡಿ

### "ಶ್ರದ್ಧಾವಾನ್ ಲಭತೇ ಜ್ಞಾನಮ್"
### (ಶ್ರದ್ಧೆಯುಳ್ಳವನಿಗೆ ಜ್ಞಾನ ಲಭಿಸುತ್ತದೆ)


**ಅನು : ಶ್ರೀ ಪುರುಷೋತ್ತಮ ಗಲಗಲಿ**
ಶ್ರದ್ಧಾ – ನಂಬಿಕೆಯ ಪರಮ ಸತ್ಯ 3

**ಅನು : ಡಾ. ಕೆ.ಎಸ್. ಆಮೂರ**
ನಂಬಿಕೆಯ ಸಹಜ ಗುಣ 10

**ಅನು : ಶ್ರೀ ವೀರೇಂದ್ರ ಸಿಂಪಿ**
ನಂಬಿಕೆ ಮತ್ತು ಸಂಶಯ 19

**ಅನು : ಡಾ. ಕೆ.ಎಸ್. ಆಮೂರ**
ನಂಬಿಕೆ ಮತ್ತು ಯೋಗ 26

**ವಾರ್ತಾಪತ್ರ** 44

**(All India Magazine) ಸಂಪಾದಕರ ಟಿಪ್ಪಣಿ:**

ಅಮರತ್ವವನ್ನು ಕೆಳಗಿಳಿಸಿ ತರುವುದಕ್ಕಾಗಿರುವ ಅವಶ್ಯವಿರುವ ನಾಲ್ಕು ಆಧಾರ ಸ್ತಂಭಗಳಲ್ಲಿ ನಂಬಿಕೆ ಒಂದು, ಅಭೀಪ್ಸೆ, ಆರಾಧನೆ ಹಾಗೂ ಪರಿಶುದ್ಧತೆ ಇವು ಉಳಿದ ಸ್ತಂಭಗಳು. (ಆಧಾರ ಗ್ರಂಥ: Champaklal speaks, ಪು. 70). ಅದು (ನಂಬಿಕೆ) ಯೋಗಕ್ಕಾಗಿ ಅಷ್ಟೇ ಅಲ್ಲ, ಆದರೆ ನಮ್ಮ ಪ್ರತಿದಿನದ ಜೀವನಕ್ಕೂ ಅತ್ಯಗತ್ಯದ್ದಾಗಿದೆ ಎಂದು ಶ್ರೀಮಾತೆಯವರು ತಿಳಿಯಪಡಿಸಿದ್ದಾರೆ. ಇನ್ನೊಂದೆಡೆಗೆ ಸಂಶಯ ಒಂದು ದೊಡ್ಡ ಅಡೆತಡೆಯಾಗಿರುತ್ತದೆ. ಹಾಗಿದ್ದರೂ ಶೋಧನೆಯ ಮನೋಭಾವ (inquiry) ಮತ್ತು ವ್ಯತ್ಯಾಸ ಗುರುತಿಸುವಿಕೆಯ ಸಾಮರ್ಥ್ಯ ಇವುಗಳಿಂದ ಸಂಶಯವನ್ನು ಭಿನ್ನವಾಗಿ ನೋಡಬೇಕು, ಹಾಗೆಯೇ ನಂಬಿಕೆಯ ಪದ್ಧತಿಗಳು ಮತ್ತು ವಿಚಾರಶೂನ್ಯ ಮೂಢ ನಂಬಿಕೆ ಹೊಂದಿರುವ ಮನೋವೃತ್ತಿ ಇವುಗಳಿಂದ ನಂಬಿಕೆಯನ್ನು ಭಿನ್ನವಾಗಿ ನೋಡಬೇಕಾದ ಆವಶ್ಯಕತೆ ಇದೆ. ನಂಬಿಕೆ ಬಹಳ ಆಳವಾದದ್ದು, ಅದು ಆತ್ಮದ ಬೆಳಕು ಹಾಗೆಯೇ ನಮ್ಮ ಆಳಾತಿ ಆಳಗಳಲ್ಲಿ ನಿದ್ರಿಸುತ್ತಿರುವ ಸಾಮರ್ಥ್ಯ. ಆ ಪ್ರಕಾಶ ಹಾಗೂ ಸಾಮರ್ಥ್ಯಗಳಿಲ್ಲದೆ ನಾವು ಜೀವನದಲ್ಲಿಯಾಗಲಿ ಇಲ್ಲವೆ ಯೋಗದಲ್ಲಿಯಾಗಲಿ ಒಂದು ಹೆಜ್ಜೆಯನ್ನೂ ಮುಂದಿರಿಸಲಾರೆವು. ಈ ಸಂಚಿಕೆ ಹಾಗೂ ಮುಂದಿನ (ಜುಲೈ ತಿಂಗಳಿನ) ಸಂಚಿಕೆ ಇವುಗಳನ್ನು ಈ ಆಂತರಿಕ ದಿಕ್ಸೂಚಿ(compass)ಗಾಗಿ ಮೀಸಲಿಡಲಾಗಿದೆ. ತರ್ಕದ ಪ್ರಕಾಶ ವಿಫಲವಾದಾಗ, ಹಾಗೂ ಮನಸ್ಸು ಹೊರ ನೋಟಗಳಿಂದ ಮತ್ತು ಮೇಲುನೋಟಕ್ಕೆ ಕಂಡುಬರುವ ವಾಸ್ತವತೆಗಳಿಂದ ಕುರುಡಾದಾಗ ಈ ದಿಕ್ಸೂಚಿ ಯೋಗದ ಹಡಗನ್ನು ಸರಿಯಾದ ದಿಶೆಯಲ್ಲಿ ಚುಕ್ಕಾಣಿಯಿಂದ ನಡೆಸುತ್ತದೆ.

ಜೂನ್ ತಿಂಗಳಿಗೆ ಸಂಬಂಧಿಸಿದ ಸಂಚಿಕೆಯಲ್ಲಿ ನಾವು ಕೇವಲ ಶ್ರೀ ಅರವಿಂದರ ಶಬ್ದಗಳನ್ನು ಕೈಗೆತ್ತಿಕೊಳ್ಳುತ್ತೇವೆ. ಜುಲೈ ತಿಂಗಳಿಗೆ ಸಂಬಂಧಿಸಿದ ಸಂಚಿಕೆಯಲ್ಲಿ ಶ್ರೀಮಾತೆಯವರ ಶಬ್ದಗಳ ಸಂಕಲನವಿರುತ್ತದೆ. ನಂಬಿಕೆ ಕುರಿತಾದ ಈ ಎರಡು ಪ್ರತ್ಯೇಕ ಸಂಚಿಕೆಗಳು ಭಾರೀ ಮಹತ್ವದವಾಗಿವೆ, 'ನಂಬಿಕೆ' ಗುಣದ ಮಹತ್ವವನ್ನು ಅವು ಒತ್ತಿ ಹೇಳುತ್ತವೆ, ಪರಸ್ಪರ ಪೂರಕವಾಗಿವೆ ಮತ್ತು ಒಂದು ಇನ್ನೊಂದರೊಡನೆ ಸ್ಪರ್ಧಿಸುತ್ತಿರುವ ಹಾಗಿವೆ.

*



ನಂಬಿಕೆ ತಾಮಸಿಕವಾದದ್ದು ಹಾಗೂ ನಿಷ್ಪರಿಣಾಮಕಾರಿ ಆಗಬಲ್ಲದು. ಉದಾಹರಣೆಗೆ "ಶ್ರೀಮಾತೆಯವರು ನನಗಾಗಿ ಎಲ್ಲವನ್ನೂ ಕೈಕೊಳ್ಳುತ್ತಾರೆ ಎಂದು ನಾನು ನಂಬಿದ್ದೇನೆ, ಹಾಗಾಗಿ ನಾನೇನನ್ನೂ ಕೈಕೊಳ್ಳುವುದಿಲ್ಲ. ಅವರು ಬಯಸಿದಾಗ ನನ್ನನ್ನು ಪರಿತವರ್ತನೆಗೆ ಒಳಪಡಿಸುವರು." ಅದು ನಿಷ್ಕ್ರಿಯ ಹಾಗೂ ಜಡ ನಂಬಿಕೆ, ಕ್ರಿಯಾಶೀಲವಾದದ್ದಲ್ಲ.

**CWSA, 29/99–100** – **ಶ್ರೀ ಅರವಿಂದರು**

*

## ಶ್ರದ್ಧಾ – ನಂಬಿಕೆಯ ಪರಮ ಸತ್ಯ

### ಮನುಷ್ಯನಲ್ಲಿಯ ಆತ್ಮ ನಂಬಿಕೆಯಿಂದಾದದ್ದು

ಈ ಪುರುಷ, ಮನುಷ್ಯನಲ್ಲಿರುವ ಆತ್ಮ, ಅದಾಗಿರಬಹುದಾದ ಹಾಗೆ, ಶ್ರದ್ಧೆಯಿಂದಾದದ್ದು; ಶ್ರದ್ಧೆಯೆಂದರೆ ಒಂದು ನಂಬಿಕೆ, ಇರುವುದಕ್ಕಾಗಿ ಒಂದು ಸಂಕಲ್ಪ, ತನ್ನಲ್ಲಿ ಹಾಗೂ ಅಸ್ತಿತ್ವದಲ್ಲಿ ನಂಬಿಕೆ ಮತ್ತು ಆ ಸಂಕಲ್ಪ, ನಂಬಿಕೆ, ಅವನಲ್ಲಿರುವ ರಚನಾತ್ಮಕ ನೆಚ್ಚಿಕೆ ಏನೇ ಆಗಿರಲಿ, ಅದು ಅವನಾಗಿರುತ್ತದೆ,

ಅವನು ಅದಾಗಿರುತ್ತಾನೆ, ಶ್ರದ್ಧಾಮಯೋಽಯಂ ಪುರುಷೋ ಯೋ ಯಚ್ಛ್ರದ್ಧಃ ಸ ಏವ ಸಃ. ಈ ಅರ್ಥಗರ್ಭಿತ ಹೇಳಿಕೆಯನ್ನು ಸ್ವಲ್ಪ ಹತ್ತಿರದಿಂದ ನಾವು ನೋಡಿದರೆ ಈ ಏಕಮಾತ್ರ ಸಾಲು ಅದರ ಸಾಮರ್ಥ್ಯಪೂರ್ಣ ಶಬ್ದಗಳಲ್ಲಿ ವ್ಯಾವಹಾರಿಕ ಕಾರ್ಯ ವಿಧಾನದ ಆಧುನಿಕ ಪರಮ ಸತ್ಯವನ್ನು ಸೂಚ್ಯವಾಗಿ ಒಳಗೊಂಡಿರುತ್ತದೆ ಎಂಬುದನ್ನು ಕಂಡುಕೊಳ್ಳುತ್ತೇವೆ. ಏಕೆಂದರೆ ಮನುಷ್ಯ ಇಲ್ಲವೆ ಮನುಷ್ಯನ ಆತ್ಮ ಅವನಲ್ಲಿರುವ ನಂಬಿಕೆಯೊಂದಿಗೆ – ಈ ನಂಬಿಕೆಯನ್ನು ಆಳಾತಿ ಆಳದ ಅರ್ಥದಲ್ಲಿ ತೆಗೆದುಕೊಂಡಾಗ – ಕೂಡಿಕೊಂಡಾಗ ಅವನು ನೋಡುವ ಹಾಗೂ ಜೀವಿಸಲು ಸಂಕಲ್ಪಿಸುವ ಸತ್ಯ ಅವನ ಸತ್ತೆಯ ಸತ್ಯವಾಗಿರುತ್ತದೆ, ಅವನು ಸೃಷ್ಟಿಸಿದ ಇಲ್ಲವೆ ಸೃಷ್ಟಿಸುತ್ತಿರುವ ಅವನ ಸತ್ತೆಯ ಸತ್ಯವಾಗಿರುತ್ತದೆ ಮತ್ತು ಅವನಿಗಾಗಿಯೇ ಬೇರೆ ಯಾವ ನೈಜ ಸತ್ಯವಿರುವುದಿಲ್ಲ. ಈ ಸತ್ಯ ಅವನ ಆಂತರಿಕ ಹಾಗೂ ಬಾಹ್ಯ ಕ್ರಿಯೆಗಳಿಗೆ ಸಂಬಂಧಿಸಿದ ವಿಷಯ, ಅವನ ಸಂಭೂತಿಯ ವಿಷಯ, ಆತ್ಮದ ಕ್ರಿಯಾಶೀಲತೆಗೆ ಸಂಬಂಧಿಸಿದ್ದು, ಅದು ಅವನಲ್ಲಿ ಎಂದಿಗೂ ಬದಲಾಗದೆ ಇರುವ ವಿಷಯಕ್ಕೆ ಸೇರಿದ್ದಾಗಿರುವುದಿಲ್ಲ. ಇಂದು ಅವನೇನಾಗಿರುವನೋ ಅದು ಅವನ ಸ್ವಭಾವದ ಗತಕಾಲದ ಸಂಕಲ್ಪ–ದಿಂದಾದದ್ದು, ತಿಳಿದುಕೊಳ್ಳಲು, ನಂಬಲು, ಮತ್ತು ಅವನ ಬುದ್ಧಿಮತ್ತೆಯಲ್ಲಿ ಹಾಗೂ ಪ್ರಾಣಿಕ ಶಕ್ತಿಯಲ್ಲಿ ಇರಲು ಆ ಸಂಕಲ್ಪವನ್ನು ಪೋಷಿಸಿಕೊಂಡು ಹಾಗೂ ಮುಂದುವರಿಸಿಕೊಂಡು ಬರಲಾಗಿದೆ. ಅವನ ದ್ರವ್ಯದಲ್ಲಿಯೇ ಕ್ರಿಯಾಶೀಲವಾದ ಈ ಸಂಕಲ್ಪ ಮತ್ತು ನಂಬಿಕೆ ಇವು ತೆಗೆದುಕೊಳ್ಳುವ ಯಾವುದೇ ಹೊಸ ತಿರುವಿನ ಪ್ರಕಾರ ಅವನು ಭವಿಷ್ಯತ್ತಿನಲ್ಲಿ ಆಗುವ ಪ್ರವೃತ್ತಿ ಹೊಂದಿರುತ್ತಾನೆ. ಮನಸ್ಸು ಮತ್ತು ಪ್ರಾಣ ಇವುಗಳ ನಮ್ಮದೇ ಕ್ರಿಯೆಯಲ್ಲಿ ಅಸ್ತಿತ್ವದ ನಮ್ಮದೇ ಸತ್ಯವನ್ನು ಸೃಷ್ಟಿಸುತ್ತೇವೆ, ಇದನ್ನೇ ಇನ್ನೊಂದು ರೀತಿಯಲ್ಲಿ ನಮ್ಮನ್ನು ಸೃಷ್ಟಿಸುವವರು ನಾವೇ, ನಮ್ಮನ್ನು ತಯಾರಿಸುವವರೂ ನಾವೇ ಎಂದು ಹೇಳಬಹುದು.

**CWSA, 19/482** **– ಶ್ರೀ ಅರವಿಂದರು**

*

**ಭಗವಂತನಲ್ಲಿ ನಾವಿರಿಸಿರುವ ನಂಬಿಕೆಗನುಸಾರವಾಗಿ ಅವನು ನಮ್ಮನ್ನು ಭೇಟಿ ಮಾಡುತ್ತಾನೆ**

ಪೂಜೆ ಮಾಡುವವನ ಮನಸ್ಸಿಗೆ ಉಪಸ್ಥಿತವಾಗುವ ಭಗವಂತನ ಯಾವುದೇ ಸಂಕೇತ, ರೂಪ ಇಲ್ಲವೆ ಅವನ ಬಗೆಗಿನ ಕಲ್ಪನೆ ಇವುಗಳನ್ನು

ಭಗವಂತ ಒಪ್ಪಿಕೊಳ್ಳುತ್ತಾನೆ. ಇದು 'ಯಾಮ್ ತನುಮ್ ಶ್ರದ್ಧಯಾ ಅರ್ಚಿತು ಮಿಚ್ಛತಿ' ಎಂದು ಒಂದೆಡೆ ಹೇಳಿದ ರೀತಿಯಲ್ಲಿದೆ. ಮತ್ತು ಮನುಷ್ಯ ತನ್ನಲ್ಲಿರುವ ನಂಬಿಕೆಗನುಸಾರವಾಗಿ ಅವನನ್ನು ಭೇಟಿಮಾಡುತ್ತಾನೆ. ಎಲ್ಲ ನಿಷ್ಕಪಟ ಧಾರ್ಮಿಕ ನಂಬಿಕೆ ಹಾಗೂ ಆಚರಣೆಗಳು ಏಕೈಕ ಪರಮೋಚ್ಚ ದೇವ ಪ್ರಮುಖನನ್ನು ಅರಸುವುದಕ್ಕಾಗಿವೆ; ಏಕೆಂದರೆ ಅವನು ಯಾವಾಗಲೂ ಮನುಷ್ಯನ ತ್ಯಾಗ ಹಾಗೂ ಆತ್ಮ ಸಂಯಮಗಳ ಏಕೈಕ ಪ್ರಭು ಮತ್ತು ಅವನ ಪ್ರಯತ್ನ ಹಾಗೂ ಅಭೀಪ್ಸೆಗಳಿಂದ ಅನಂತ ಸಂತೋಷ ಪಡೆಯುವವನು. ಪೂಜೆಯ ರೂಪ ಎಷ್ಟೇ ಚಿಕ್ಕದಾಗಿರಲಿ ಇಲ್ಲವೆ ಕೆಳಸ್ತರದ್ದಾಗಿರಲಿ, ದೇವ ಪ್ರಮುಖನ ಬಗ್ಗೆ ವಿಚಾರ ಎಷ್ಟೇ ಸೀಮಿತವಾಗಿರಲಿ, ಕೊಡುವುದು ಹಾಗೂ ನಂಬಿಕೆ ಹಾಗೂ ಪ್ರಾಪಂಚಿಕ ಪ್ರಕೃತಿಯ ಮೂಲಕ ಉಂಟಾಗುವ ಸೀಮಿತತೆಯಿಂದ ತನ್ನದೇ ಅಹಂಕಾರದ ಪೂಜೆಯ ಪರದೆಯ ಹಿಂದೆ ಸಾಗುವುದಕ್ಕಾಗಿರುವ ಪ್ರಯತ್ನ ಎಷ್ಟೇ ಸೀಮಿತವಾಗಿರಲಿ, ಆಗಲೂ ಕೂಡ ಅದು ಮನುಷ್ಯನ ಆತ್ಮ ಮತ್ತು ಸರ್ವಾತ್ಮ ಇವರ ನಡುವೆ ಸಂಪರ್ಕ ಉಂಟು ಮಾಡುವ ಎಳೆಯ ರೂಪದ್ದಾಗಿರುತ್ತದೆ ಮತ್ತು ಅಲ್ಲಿ ಉತ್ತರವಿರುತ್ತದೆ.

**CWSA, 19/332** **– ಶ್ರೀ ಅರವಿಂದರು**

*

ಯಾವ ಬೌದ್ಧಿಕ ಸಂಶಯವೂ ನಮ್ಮನ್ನು ಕ್ಷೋಭೆಗೊಳಪಡಿಸದೆ ಹಾಗಿರುವ ನಂಬಿಕೆ ನಮ್ಮಲ್ಲಿರಬೇಕು, ಶ್ರದ್ಧಾವಾನ್ ಲಭತೇ ಜ್ಞಾನಮ್. "ಅಜ್ಞಾನಿಯಾದ, ಸಂಶಯಪಡುವ ಆತ್ಮ ಅಧೋಗತಿಗೆ ಹೋಗುತ್ತದೆ, ಸಂಶಯಗಳಿಂದ ತುಂಬಿಕೊಂಡಿರುವ ಆತ್ಮಕ್ಕೆ ಈ ಜಗತ್ತಾಗಲಿ, ಪರಮೋಚ್ಚ ಜಗತ್ತಾಗಲಿ, ಯಾವುದೇ ಬಗೆಯ ಸಂತೋಷವಾಗಲಿ ಇರುವುದಿಲ್ಲ." ವಾಸ್ತವದಲ್ಲಿ ಸತ್ಯವಾದದ್ದೆಂದರೆ ನಂಬಿಕೆಯಿಲ್ಲದೆ ಈ ಜಗತ್ತಿನಲ್ಲಾಗಲಿ, ಇಲ್ಲವೆ ಮೇಲಿನ ಜಗತ್ತನ್ನಾಗಲಿ ವಶದಲ್ಲಿಟ್ಟುಕೊಳ್ಳಬಹುದಾದ ನಿರ್ಧಾರಕವೆನಿಸುವ ಏನನ್ನೂ ಸಿದ್ಧಿಸಿಕೊಳ್ಳಲಾಗುವುದಿಲ್ಲ. ಕೇವಲ ಯಾವುದಾದರೊಂದು ನಿಶ್ಚಿತ ಮತ್ತು ಧನಾತ್ಮಕ ಆಧಾರದ ಮೇಲೆ ಹಿಡಿತ ಸಾಧಿಸುವುದರಿಂದ ಮನುಷ್ಯ ಪ್ರಾಪಂಚಿಕ ಇಲ್ಲವೆ ಸ್ವರ್ಗೀಯ ಯಶಸ್ಸನ್ನು, ತೃಪ್ತಿಯನ್ನು ಹಾಗೂ ಸಂತೋಷವನ್ನು ಸ್ವಲ್ಪ ಪ್ರಮಾಣದಲ್ಲಿ ದೊರಕಿಸಬಲ್ಲ; ಕೇವಲ ಸಂಶಯ ಮನೋವೃತ್ತಿಯಿರುವ ಮನಸ್ಸು ತನ್ನನ್ನು ಶೂನ್ಯದಲ್ಲಿ ಕಳೆದುಕೊಳ್ಳುತ್ತದೆ. ಹಾಗಿದ್ದಾಗ್ಯೂ ನಿಮ್ನತರ ಜ್ಞಾನದಲ್ಲಿ

ಸಂಶಯ ಹಾಗೂ ಸಂಶಯಾತ್ಮಕ ಮನೋವೃತ್ತಿಗಳಿಗೆ ಅವುಗಳದೇ ತಾತ್ಕಾಲಿಕ ಉಪಯೋಗಗಳಿವೆ. ಉಚ್ಚತರವಾದವುಗಳಲ್ಲಿ ಅವು ಅಡೆತಡೆಯಾಗಿರುತ್ತವೆ: ಏಕೆಂದರೆ ಅಲ್ಲಿ ಇಡೀ ರಹಸ್ಯ, ಸತ್ಯ ಹಾಗೂ ದೋಷಗಳಲ್ಲಿ ಸಮತೋಲನವನ್ನು ಕಂಡುಕೊಳ್ಳುವುದಿರುವುದಿಲ್ಲ, ತೆರೆದು ತೋರಿಸಿದ ಸತ್ಯವನ್ನು ಸತತ ಪ್ರಗತಿಪರವಾಗಿ ಸಿದ್ಧಿಸಿಕೊಳ್ಳುವುದಿರುತ್ತದೆ.

**CWSA, 19/204** **– ಶ್ರೀ ಅರವಿಂದರು**

*

**ನಂಬಿಕೆಯನ್ನು ದೊರಕಿಸಲು ವಿಫಲವಾದ ಆತ್ಮ ದೇವ ಪ್ರಮುಖನಲ್ಲಿ ಬೆಳೆಯಲಾರದು**

ಆದರೆ ನಂಬಿಕೆ ಅವಶ್ಯವಾಗಿದೆ; ನಂಬಿಕೆ ಅನುಪಸ್ಥಿತವಾಗಿದ್ದರೆ (absent) ಮತ್ತು ಮನುಷ್ಯ ಬಾಹ್ಯ ವಾಸ್ತವತೆಗಳ ಮೂಲಕ ಸಾಗಿ ಹೋಗುವ ವಿಮರ್ಶಾತ್ಮಕ ಬುದ್ಧಿಮತ್ತೆಯಲ್ಲಿ ವಿಶ್ವಾಸವಿರಿಸಿದರೆ, ದಿವ್ಯಜ್ಞಾನವೀಯುವುದನ್ನು ಅಸೂಯೆಯಿಂದ ಪ್ರಶ್ನಿಸಿದರೆ – ಅದಕ್ಕೆ ಕಾರಣ ದಿವ್ಯಜ್ಞಾನವು ತೋರಿಕೆಯ ಸ್ವಭಾವದ ವಿಭಜನೆಗಳು, ಅಪರಿಪೂರ್ಣತೆಗಳು ಇವುಗಳೊಡನೆ ವ್ಯವಹಾರ ಮುಕ್ತಾಯಗೊಳಿಸುವುದಿಲ್ಲ, ಅದನ್ನು ಮೀರಿಹೋಗುತ್ತಿರುವಂತೆ ಮತ್ತು ನಮ್ಮ ಸದ್ಯದ ಅಸ್ತಿತ್ವದ ಮೊದಲ ವ್ಯಾವಹಾರಿಕ ವಾಸ್ತವತೆಗಳು ಅದರ ದುಃಖ, ನೋವು, ಅನಿಷ್ಟ, ದೋಷ, ಅದೈವಿಕ ದೋಷ ಮತ್ತು ಅಡೆತಡೆ, ಆಶುಭಮ್ ಇವುಗಳಾಚೆಗೆ ನಮ್ಮನ್ನು ಕರೆದೊಯ್ಯುತ್ತಿರುವ ಏನನ್ನೋ ಕುರಿತು ಹೇಳುತ್ತಿರುವಂತೆ ತೋರಿಬರುತ್ತದೆ. – ಆಗ ಆ ಶ್ರೇಷ್ಠತರ ಜ್ಞಾನವನ್ನು ಜೀವಿಸಿ ಅನುಭವಕ್ಕೆ ತಂದುಕೊಳ್ಳುವುದರ ಸಾಧ್ಯತೆ ಇರುವುದಿಲ್ಲ. ಉಚ್ಚತರ ಸತ್ಯದಲ್ಲಿ ಹಾಗೂ ನಿಯಮದಲ್ಲಿ ನಂಬಿಕೆ ದೊರಕಿಸುವುದರಲ್ಲಿ ವಿಫಲವಾದ ಆತ್ಮ ಮೃತ್ಯು, ದೋಷ ಹಾಗೂ ಅನಿಷ್ಟಗಳಿಗೆ ಅಧೀನವಾದ ಸರ್ವಸಾಧಾರಣ ಮರ್ತ್ಯ ಜೀವನದ ಮಾರ್ಗಕ್ಕೆ ಮರಳಿ ಹೋಗಬೇಕು, ಅದು ನಿರಾಕರಿಸುವ ದೇವ ಪ್ರಮುಖತೆಯಲ್ಲಿ ಬೆಳೆಯಲಾರದು. ಏಕೆಂದರೆ ಜೀವಿಸಬೇಕಾದ ಸತ್ಯ ಇದಾಗಿದೆ – ಆತ್ಮದ ಬೆಳೆಯುತ್ತಿರುವ ಪ್ರಕಾಶದಲ್ಲಿ ಜೀವಿಸಬೇಕಾಗಿದೆ, ಮನಸ್ಸಿನ ಅಂಧಕಾರದಲ್ಲಿ ವಾದ ಮಾಡಿ ತೆಗೆದು ಹಾಕುವಂತಹದಲ್ಲ.

ಮನುಷ್ಯ ಅದರಲ್ಲಿ ಬೆಳೆಯಬೇಕು, ಅದಾಗಬೇಕು, ಖಚಿತ ಪಡಿಸಿಕೊಳ್ಳಲು ಇರುವ ಮಾರ್ಗ ಅದೊಂದೇ. ನಿಮ್ನತರ ಸತ್ತೆಯನ್ನು ಮೀರಿ ಹೋಗುವುದರ

ಮೂಲಕ ಮಾತ್ರ ಮನುಷ್ಯ ನಿಜವಾದ ದೈವಿಕ ಆತ್ಮವಾಗಬಲ್ಲ ಮತ್ತು ನಮ್ಮ ಆಧ್ಯಾತ್ಮಿಕ ಅಸ್ತಿತ್ವದ ಸತ್ಯವನ್ನು ಜೀವಿಸಬಲ್ಲ. ಅದಕ್ಕೆ ವಿರುದ್ಧವಾಗಿ ಮನುಷ್ಯ ಇರಿಸಬಹುದಾದ ಎಲ್ಲ ತೋರಿಕೆಯ ಸತ್ಯಗಳು ನಿಮ್ನತರ ಪ್ರಕೃತಿಯ ಗೋಚರ ವಿಷಯಗಳಾಗಿರುತ್ತವೆ (appearances). ಉಚ್ಚತರ ಜ್ಞಾನವನ್ನು ಒಪ್ಪಿಕೊಳ್ಳುವುದರ ಮೂಲಕ ಮಾತ್ರ ಅನಿಷ್ಟದಿಂದ, ನಿಮ್ನ ಪ್ರಕೃತಿಯ ದೋಷದಿಂದ ಅಶುಭಮ್‌ದಿಂದ ಬಿಡುಗಡೆ ದೊರಕಬಲ್ಲದು; ಆ ಉಚ್ಚತರ ಜ್ಞಾನದಲ್ಲಿ ಈ ಎಲ್ಲ ತೋರಿಕೆಯ ಅನಿಷ್ಟ ತನ್ನ ನೈಜತೆ ಇಲ್ಲದಿರುವುದರ ಬಗ್ಗೆ ಕೊನೆಯಲ್ಲಿ ಮನವರಿಕೆ ಮಾಡಿಕೊಳ್ಳಬಲ್ಲದು, ಅದು ನಮ್ಮ ಅಂಧಕಾರದ ಸೃಷ್ಟಿಯೆಂದು ತೋರಿಸಿ–ಕೊಡಲಾಗುವುದು. ಆದರೆ ಹೀಗೆ ದೈವೀ ಪ್ರಕೃತಿಯ ಸ್ವಾತಂತ್ರ್ಯದಲ್ಲಿ ಬೆಳೆಯಲು ಮನುಷ್ಯ ನಮ್ಮ ಸದ್ಯದ ಸೀಮಿತ ಸ್ವಭಾವದಲ್ಲಿ ರಹಸ್ಯವಾಗಿರುವ ದೇವ ಪ್ರಮುಖನನ್ನು ಒಪ್ಪಿಕೊಳ್ಳಬೇಕು ಮತ್ತು ಅವನಲ್ಲಿ ವಿಶ್ವಾಸವಿರಿಸಬೇಕು. ಇಡಿಯಾದ ನಂಬಿಕೆಯೊಂದಿಗೆ, ಅಹಂಕಾರರಹಿತರಾಗಿ ಯಾವುದರಲ್ಲಿ ನಾವು ವಿಶ್ವಾಸವನ್ನಿರಿಸುವೆವೋ, ಏನಾಗಲು ಸಂಕಲ್ಪಿಸುವೆವೋ ಅದನ್ನು ನಮ್ಮ ಅಂತರಂಗದಲ್ಲಿರುವ ದೇವ ನಿಶ್ಚಿತವಾಗಿ ಸಿದ್ಧಿಸಿಕೊಳ್ಳುವನು. ಆದರೆ ಅಹಂಮನ್ಯತೆಯ ಮನಸ್ಸು ಹಾಗೂ ಪ್ರಾಣಗಳಿಂದ ಕೂಡಿಕೊಂಡು ಈಗ ನಾವು ತೋರಿಕೆಯಲ್ಲಿ ಅಗಿರುವುದು ತನ್ನನ್ನು ಮೊದಲು ಸಮರ್ಪಿಸಬೇಕು, ಆ ಸಮರ್ಪಣೆ ನಮ್ಮ ಅಂತರಂಗದಲ್ಲಿ ಆಳಾತಿ ಆಳದಲ್ಲಿರುವ ರಹಸ್ಯ ಭಗವಂತನ ಹಸ್ತಗಳಲ್ಲಾಗಬೇಕು. ಅದರಿಂದಾಗಿ ರೂಪ ಪರಿವರ್ತನೆ ಪಡೆಯುವಂತಾಗುವುದು.

**CWSA, 19/309–10** **– ಶ್ರೀ ಅರವಿಂದರು**

*

**ನಂಬಿಕೆ ನಮ್ಮ ಮೊದಲ ಆವಶ್ಯಕತೆ**

ನಂಬಿಕೆ ನಮ್ಮ ಮೊದಲ ಆವಶ್ಯಕತೆಯಾಗಿರುತ್ತದೆ; ಏಕೆಂದರೆ ಭಗವಂತನಲ್ಲಿ, ಅಸ್ತಿತ್ವದಲ್ಲಿ ಹಾಗೂ ದೈವೀ ಸತ್ತೆಯ ಎಲ್ಲ–ಮಹತ್ವದಲ್ಲಿ ನಂಬಿಕೆ ಇಲ್ಲದೆ ಅಭೀಪ್ಸೆ ಪಡುವುದಕ್ಕೆ ಹಾಗೂ ಮುಡಿಪಾಗಿರಿಸುವುದಕ್ಕೆ ಯಾವ ಕಾರಣವೂ ಇರುವುದಿಲ್ಲ, ಅಭೀಪ್ಸೆಯಲ್ಲಿ ಸಾಮರ್ಥ್ಯವಿರುವುದು ಸಾಧ್ಯವಿಲ್ಲ, ಮುಡಿಪಾಗಿರಿಸಿಕೊಳ್ಳುವಿಕೆಯ ಹಿಂದೆ ಶಕ್ತಿಯಿರುವುದಿಲ್ಲ. ಪ್ರಧಾನವಾದ ಹಾಗೂ ಮೂಲಭೂತವಾದ ನಂಬಿಕೆ ಅಲ್ಲಿದ್ದರೆ ಸಂಶಯಗಳಿಗೆ ಮಹತ್ವವಿರುವುದಿಲ್ಲ.

ಸಂಶಯಗಳು ಬರಬಹುದು, ಆದರೆ ಬಂಡೆಯ ಹಾಗಿರುವ ಸತ್ತೆಯ ನಂಬಿಕೆಯ ವಿರುದ್ಧ ಜಯಶಾಲಿಯಾಗಲಾರವು. ಸಂಶಯ ಮತ್ತು ಹತಾಶೆಗಳ ಹೊಯ್ದಾಟದಿಂದ ಆ ಬಂಡೆ ಸ್ವಲ್ಪಕಾಲದವರೆಗೆ ಆವರಿಸಿಕೊಂಡಿರಬಹುದು, ಆದರೆ ಆ ಬಂಡೆ ಸ್ಥಿರವಾಗಿ ಹಾಗೂ ವಿನಾಶವಿಲ್ಲದೆ ಹೊರಹೊಮ್ಮುವುದು.

**CWSA, 12/347** **– ಶ್ರೀ ಅರವಿಂದರು**

*

**ಪ್ರತಿ ಹೆಜ್ಜೆಯಲ್ಲಿ ನಂಬಿಕೆ ಅವಶ್ಯವಾಗಿದೆ**

ಆದ್ಯಂತವಾಗಿ ಮತ್ತು ಪ್ರತಿಯೊಂದು ಹೆಜ್ಜೆಯಲ್ಲಿ ನಂಬಿಕೆ ಅವಶ್ಯವಾಗಿದೆ, ಏಕೆಂದರೆ ಅದು ಆತ್ಮದ ಒಪ್ಪಿಗೆಯ ಒಂದು ಆವಶ್ಯಕತೆಯಾಗಿದೆ, ಮತ್ತು ಈ ಒಪ್ಪಿಗೆಯಿಲ್ಲದೆ ಅಲ್ಲಿ ಯಾವ ಪ್ರಗತಿಯನ್ನೂ ಸಾಧಿಸಲಾಗುವುದಿಲ್ಲ. ನಮ್ಮ ನಂಬಿಕೆ ಮೊದಲು ಸಾರಭೂತ ಸತ್ಯದಲ್ಲಿ ಹಾಗೂ ಯೋಗದ ತತ್ವಗಳಲ್ಲಿ ನೆಲೆಸಿರಬೇಕು. ಇದು ಬುದ್ಧಿಮತ್ತೆಯಲ್ಲಿ ಮಸುಕಾಗಿದ್ದರೂ, ಹೃದಯದಲ್ಲಿ ನಿರಾಶಾಜನಕ–ವಾಗಿದ್ದರೂ, ಪ್ರಾಣಿಕ ಮನಸ್ಸಿನಲ್ಲಾಗುವ ಸತತ ನಿರಾಕರಣೆ ಹಾಗೂ ವಿಫಲತೆಗಳಿಂದಾಗಿ ಸವೆದು ಹೋಗಿದ್ದರೂ, ದಣಿದುಕೊಂಡಿದ್ದರೂ ಅದಕ್ಕೆ ಅಂಟಿಕೊಳ್ಳುವುದಕ್ಕಾಗಿ ಅದರತ್ತ ತಿರುಗಿ ಬರುವುದಕ್ಕಾಗಿ ಆಳಾತಿ ಆಳದ ಆತ್ಮದಲ್ಲಿ ಏನೋ ಒಂದಿರಬೇಕು, ಹಾಗಿಲ್ಲದಿದ್ದರೆ ನಾವು ಮಾರ್ಗದಲ್ಲಿ ಪತನಗೊಳ್ಳಬಹುದು, ಇಲ್ಲವೆ ದೌರ್ಬಲ್ಯದಿಂದ, ತಾತ್ಕಾಲಿಕ ಸೋಲನ್ನು ಸಹಿಸಿಕೊಳ್ಳಲಾಗದ ಆಶಕ್ತತೆಯಿಂದ, ತೊಂದರೆ ಮತ್ತು ಅಪಾಯದಿಂದ ಅದನ್ನು ಬಿಟ್ಟುಕೊಡಬಹುದು. ಯೋಗದಲ್ಲಿ, ಜೀವನದಲ್ಲಿರುವ ಹಾಗೆ, ಪ್ರತಿಯೊಂದು ಸೋಲು ಹಾಗೂ ಭ್ರಮನಿರಸನ, ಎದುರಾಗುವಿಕೆ, ದ್ವೇಷಿಸುವ ಮತ್ತು ವಿರೋಧಿಸುವ ಘಟನೆಗಳು ಮತ್ತು ಸಾಮರ್ಥ್ಯಗಳು ಇವುಗಳ ಸಮ್ಮುಖದಲ್ಲಿ ಕೊನೆಯವರೆಗೂ ದಣಿದುಕೊಳ್ಳದೆ ಪಟ್ಟುಹಿಡಿಯುವ ಮನುಷ್ಯ ಕೊನೆಗೆ ಜಯ ಗಳಿಸುತ್ತಾನೆ ಮತ್ತು ತನ್ನ ನಂಬಿಕೆಗೆ ಸಮರ್ಥನೆ ಕಂಡುಕೊಳ್ಳುತ್ತಾನೆ, ಏಕೆಂದರೆ ಮನುಷ್ಯನಲ್ಲಿರುವ ಆತ್ಮಕ್ಕೆ ಮತ್ತು ದೈವೀ ಶಕ್ತಿಗೆ ಯಾವುದೂ ಅಸಾಧ್ಯವಾದುದಲ್ಲ.

**CWSA, 24/773** **– ಶ್ರೀ ಅರವಿಂದರು**

*

**ಈ ದ್ವಾರದಿಂದ ಸಾಗಲು ಎಲ್ಲರಿಗೂ ಅವಕಾಶವಿದೆ, ಈ ದೇಗುಲದಲ್ಲಿ ಎಲ್ಲರೂ ಪ್ರವೇಶಿಸಬಹುದು**

ಒಮ್ಮೆ ಈ ಸಮಗ್ರ ಸ್ವ–ಸಮರ್ಪಣೆಯನ್ನು ನಂಬಿಕೆಯಿಂದ ಹಾಗೂ ನಿಷ್ಕಾಪಟ್ಯದಿಂದ ಮತ್ತು ಮೂಲಭೂತ ಸಂಪೂರ್ಣತೆಯಿಂದ ಕೈಕೊಂಡಾಗ ನಮ್ಮೆಲ್ಲರಲ್ಲಿ ಇರುವ ಸಮನಾದ ದೈವೀ ಸಾನ್ನಿಧ್ಯ ಯಾವ ಪೂರ್ವಭಾವಿ ಷರತ್ತನ್ನಿರಿಸುವುದಿಲ್ಲ. ಈ ದ್ವಾರದಿಂದ ಸಾಗಲು ಎಲ್ಲರಿಗೂ ಅವಕಾಶವಿದೆ. ಎಲ್ಲರೂ ಈ ದೇಗುಲದಲ್ಲಿ ಪ್ರವೇಶಿಸಬಲ್ಲರು: ಎಲ್ಲರನ್ನೂ ಪ್ರೀತಿಸುವವನ ಭವನದಲ್ಲಿ ನಮ್ಮ ಎಲ್ಲ ಪ್ರಾಪಂಚಿಕ ಭೇದಗಳು ಮಾಯವಾಗುತ್ತವೆ. ಅಲ್ಲಿ ಸದ್ಗುಣಿಯಾದ ಮನುಷ್ಯನಿಗೆ ಆದ್ಯತೆ ನೀಡಲಾಗುವುದಿಲ್ಲ, ಇಲ್ಲವೆ ದೈವೀ ಸಾನ್ನಿಧ್ಯದಿಂದ ಪಾಪಿಯನ್ನು ಹೊರಗುಳಿಸುವುದಿಲ್ಲ. ಈ ಮಾರ್ಗದ ಮೇಲೆ ಒಟ್ಟಿಗೆ ಕೂಡಿಕೊಂಡು, ಜೀವನದಲ್ಲಿ ಪರಿಶುದ್ಧನಾದ, ನಿಯಮಗಳನ್ನು ನಿಖರವಾಗಿ ಆಚರಿಸುವ ಬ್ರಾಹ್ಮಣ ಮತ್ತು ಪಾಪ ಹಾಗೂ ವೇದನೆಗಳಿರುವ ಗರ್ಭದಿಂದ ಜನಿಸಿದ, ಜನರಿಂದ ತಿರಸ್ಕೃತನಾದ ಜಾತಿಬಾಹಿರ ಮನುಷ್ಯ ಇವರು ಪ್ರಯಾಣ ಮಾಡಿ ಸನಾತನನಲ್ಲಿ ಪರಮೋಚ್ಚ ಮುಕ್ತಿಯನ್ನು ಮತ್ತು ಅತ್ಯುಚ್ಚ ನಿವಾಸವನ್ನು ದೊರಕಿಸುವ ಅವಕಾಶವನ್ನು ಕಂಡುಕೊಳ್ಳಬಲ್ಲರು. ದೇವನ ಸಮ್ಮುಖದಲ್ಲಿ ಪುರುಷ ಹಾಗೂ ಸ್ತ್ರೀ ಸಮಾನ ಹಕ್ಕನ್ನು ಕಂಡುಕೊಳ್ಳಬಲ್ಲರು, ಏಕೆಂದರೆ ದಿವ್ಯಾತ್ಮ ವ್ಯಕ್ತಿ ವಿಶಿಷ್ಟತೆಗಳಿಗೆ ಇಲ್ಲವೆ ಸಾಮಾಜಿಕ ಭೇದಗಳಿಗೆ ಮತ್ತು ಕಟ್ಟುಪಾಡುಗಳಿಗೆ ಗೌರವ ತೋರುವವನಲ್ಲ, ಎಲ್ಲರೂ ಮಧ್ಯವರ್ತಿಯಿಲ್ಲದೆ, ನಿರ್ಬಂಧಕ್ಕೊಳಪಡಿಸುವ ಸ್ಥಿತಿ ಇಲ್ಲದೆ ನೇರವಾಗಿ ಅವನ ಹತ್ತಿರ ಹೋಗಬಲ್ಲರು. “ಬಹಳ ದುಷ್ಟ ನಡತೆಯುಳ್ಳ ಮನುಷ್ಯ ಏಕೈಕ ಹಾಗೂ ಇಡಿಯಾದ ಪ್ರೇಮದೊಂದಿಗೆ ನನ್ನತ್ತ ಹೊರಳಿದಾಗ ಅವನನ್ನು ಸಂತನೆಂದು ಪರಿಗಣಿಸಬೇಕು, ಏಕೆಂದರೆ ಅವನಲ್ಲಿರುವ ಪ್ರಯತ್ನದ ಸಂಕಲ್ಪ ಸರಿಯಾದ ಹಾಗೂ ಸಂಪೂರ್ಣವಾದ ಸಂಕಲ್ಪವಾಗಿರುತ್ತದೆ. ಅವನು ತೀವ್ರಗತಿಯಿಂದ ಸದಾಚಾರದ ಆತ್ಮವಿರುವವನಾಗುತ್ತಾನೆ ಮತ್ತು ಶಾಶ್ವತ ಶಾಂತಿಯನ್ನು ದೊರಕಿಸುತ್ತಾನೆ,” ಎಂದು ದೈವೀ ಗುರು ಹೇಳುತ್ತಾನೆ.

**CWSA, 19/334** **– ಶ್ರೀ ಅರವಿಂದರು**

*



ಎಲ್ಲದರಲ್ಲೂ ದೇವನನ್ನು ನೋಡುವುದು ಮತ್ತು ತನ್ನ ಕಣ್ಣಿಗೆ ಪ್ರಕಟಣೆಯಾದದ್ದು ಹಾಗೂ ಪ್ರಕಟಿತವಾಗಿರದೆ ಇದ್ದದ್ದು ಏಕೈಕ ದೇವ ಪ್ರಮುಖವಾಗಿದೆ ಎಂದು ಭಾವಿಸುವುದು ಪರಮೋಚ್ಚ ನಂಬಿಕೆ. ಪರಿಪೂರ್ಣ ಏಕತೆಯೆಂದರೆ ಪ್ರತಿಯೊಂದು ಕ್ರಿಯೆಯಲ್ಲಿ ಮತ್ತು ಸ್ವಭಾವದ ಎಲ್ಲ ಸಮಗ್ರತೆಯೊಂದಿಗೆ ದೇವನನ್ನು ಪ್ರತಿಕ್ಷಣ ಭೇಟಿ ಮಾಡುವುದಾಗಿರುತ್ತದೆ.

**CWSA, 19/400** **– ಶ್ರೀ ಅರವಿಂದರು**

*

## ನಂಬಿಕೆಯ ಸಹಜ ಗುಣ

**ನಂಬಿಕೆ(faith), ನೆಚ್ಚಿಕೆ(belief), ಗಾಢ ನಂಬಿಕೆ(confidence), ವಿಶ್ವಾಸ(trust)**

ನಂಬಿಕೆ ಎಂಬುದು ಸರ್ವಸಾಧಾರಣ ಶಬ್ದ = ಶ್ರದ್ಧಾ – ಭಗವಂತನ ಅಸ್ತಿತ್ವ, ವಿವೇಕ, ಸಾಮರ್ಥ್ಯ, ಪ್ರೇಮ ಮತ್ತು ಕೃಪೆ ಇವುಗಳಲ್ಲಿ ಆತ್ಮದ ನಂಬಿಕೆ – ಗಾಢ ನಂಬಿಕೆ ಮತ್ತು ವಿಶ್ವಾಸ ಇವು ನಂಬಿಕೆಯ ಮುಖಗಳು, ಪರಿಣಾಮಗಳು.

ನಿಷ್ಕಾಪಟ್ಯದಿಂದ ಕರೆ ಕೊಟ್ಟಾಗ ಭಗವಂತ ಕೇಳಿಸಿಕೊಳ್ಳುತ್ತಾನೆ ಮತ್ತು ಸಹಾಯ ಮಾಡುತ್ತಾನೆ ಮತ್ತು ಅವನು ಕೈಕೊಳ್ಳುವುದೆಲ್ಲವೂ ಅತ್ಯಂತ ಒಳ್ಳೆಯದಕ್ಕಾಗಿರುತ್ತದೆ ಎಂಬ ನಿಶ್ಚಿತತೆಯ ಭಾವನೆ ಗಾಢ ನಂಬಿಕೆಯಾಗಿರುತ್ತದೆ.

ಭಗವಂತ ಹಾಗೂ ಅವನ ಮಾರ್ಗದರ್ಶನ ಮತ್ತು ರಕ್ಷಣೆ ಕುರಿತು ಮನಸ್ಸಿನ ಮತ್ತು ಹೃದಯದ ಸಂಪೂರ್ಣ ಭರವಸೆ(reliance) ವಿಶ್ವಾಸವಾಗಿರುತ್ತದೆ.

*

ನಂಬಿಕೆ – ಕ್ರಿಯಾಶೀಲ ಹಾಗೂ ಇಡಿಯಾದ ನೆಚ್ಚಿಕೆ ಮತ್ತು ಒಪ್ಪಿಗೆ.

ನೆಚ್ಚಿಕೆ – ಕೇವಲ ಬೌದ್ಧಿಕ ಒಪ್ಪಿಗೆ.

ಮನವರಿಕೆ – ಒಳ್ಳೆಯ ಕಾರಣಗಳಿವೆ ಎಂದು ತೋರಿಬರುವುದರಿಂದಾಗಿ ಬೌದ್ಧಿಕವಾಗಿ ನೆಚ್ಚಿಕೊಳ್ಳುವುದು.

ಭರವಸೆ – ಯಾವುದೋ ಒಂದಕ್ಕಾಗಿ ಇನ್ನೊಂದರ ಮೇಲೆ ವಿಶ್ವಾಸದ ಆಧಾರದಿಂದ ಅವಲಂಬಿಸಿರುವುದು.

ವಿಶ್ವಾಸ – ಇನ್ನೊಬ್ಬನ ಸಹಾಯ ಕುರಿತು ನಿಶ್ಚಿತ ನಿರೀಕ್ಷೆಯಿರುವ ಭಾವನೆ ಮತ್ತು ಅವನ ಮಾತಿನ ಮೇಲೆ ಚಾರಿತ್ರ್ಯದ ಮೇಲೆ ಭರವಸೆ ಹೊಂದಿರುವುದು ಇತ್ಯಾದಿ.

ಗಾಢ ನಂಬಿಕೆ – ವಿಶ್ವಾಸದೊಂದಿಗಿರುವ ಸುರಕ್ಷಿತತೆಯ ಭಾವನೆ.

**CWSA, 28/342** **– ಶ್ರೀ ಅರವಿಂದರು**

*

**ನಂಬಿಕೆ ಮಾನಸಿಕ ನೆಚ್ಚಿಕೆಯಲ್ಲ, ಆದರೆ ಕ್ರಿಯಾಶೀಲ ಅಂತರ್ಬೋಧೆಯ ಮನವರಿಕೆ**

ನಾನು ನಂಬಿಕೆಯ ಮೇಲೆ ಇಷ್ಟೊಂದು ಒತ್ತು ಕೊಡುತ್ತಿದ್ದರೆ – ಧನಾತ್ಮಕ ನಂಬಿಕೆಯ ಮೇಲೆ ಕೊಡುವುದಕ್ಕಿಂತ ಹೆಚ್ಚಾಗಿ ತರ್ಕಜನ್ಯ ಸಂಶಯ ಮತ್ತು ನಿರಾಕರಣೆಗಳನ್ನು ಚೆಲ್ಲಿಕೊಡುವುದರ ಮೇಲೆ ಒತ್ತುಕೊಡುತ್ತಿದ್ದರೆ – ಅದಕ್ಕೆ ಕಾರಣವೆಂದರೆ ಈ ಸಂಶಯ ಮತ್ತು ನಿರಾಕರಣೆ ಇವು ಅಡೆತಡೆಯನ್ನುಂಟು ಮಾಡುವ ಶಕ್ತಿಗಳ ಹಸ್ತದಲ್ಲಿ ಒಂದು ಉಪಕರಣವಾಗಿವೆ ಮತ್ತು ನಾನು ನಿಮ್ಮನ್ನು ಮುನ್ನೂಕುವ ಪ್ರಯತ್ನ ಮಾಡಿದಾಗೆಲ್ಲ ನಿಮ್ಮ ಹೆಜ್ಜೆಗಳಿಗೆ ತಡೆಯನ್ನುಂಟು ಮಾಡುತ್ತವೆ. ಅದನ್ನು ಕೇವಲ ತೆಗೆದು ಹಾಕಲಾಗದಿದ್ದರೆ, ತೆಗೆದು

ಹಾಕುವದಿಲ್ಲವಾದರೆ (won't – ಬಯಸದಿರು, can't – ಕೈಕೊಳ್ಳಲಾಗದಿರು, "won't" ಸತ್ಯವಲ್ಲದ ಸಂಗತಿಗಳನ್ನು ನಂಬುವಂತಹದರಲ್ಲಿ ಕರೆದೊಯ್ಯ–ಬಹುದೆಂಬ ಕಾರಣದಿಂದ ಹೇಳಿದ್ದು, can't ವಿರುದ್ಧ ಅನುಭವದಿಂದ ಹೇಳಿದ್ದು) ಆಗ ನಾನು ನಿಮಗಾಗಿ ಅದಿಲ್ಲದೆ ಇರುವಂತೆ ವ್ಯವಸ್ಥೆ ಮಾಡಬೇಕಾಗುತ್ತದೆ. ಅದು ಕೇವಲ ವಿಧಾನವನ್ನು ನೇರವಾದದ್ದನ್ನಾಗಿ ಮತ್ತು ತುಲನಾತ್ಮಕವಾಗಿ ಸುಲಭವಾದದ್ದನ್ನಾಗಿ ಮಾಡುವುದರ ಬದಲಾಗಿ ಕಠಿಣವಾಗುವಂತೆ ಮಾಡುತ್ತದೆ.

ಪ್ರಾಪಂಚಿಕ ಮನುಷ್ಯನ ನಿರಾಕರಣೆಯನ್ನು ಅನುಭವದ ಆವಶ್ಯಕತೆ ಇಲ್ಲದೆ ತರ್ಕದಿಂದ ಮಾಡಿದ ನಿರಾಕರಣೆ ಎಂದು ನಾನು ಕರೆದೆ ಏಕೆಂದರೆ ಅವನು ನಿರಾಕರಿಸುವುದನ್ನು ಕುರಿತು ಯೋಚಿಸುವುದನ್ನು, ಪರೀಕ್ಷಿಸುವುದನ್ನು ತಿರಸ್ಕರಿಸುತ್ತಾನೆ, ಆದರೆ ನಿರಾಕರಿಸುವುದರಿಂದ ಪ್ರಾರಂಭಿಸುತ್ತಾನೆ. ಅದು ಲಿಯೋನಾರ್ಡ್ ವೂಲ್ಫ ತನ್ನ quack, quack ಪೆದ್ದು ಪೆದ್ದಾಗಿ ಎಂದು ಹೇಳಿದ ಹಾಗಿದೆ, ಅದಕ್ಕೆ ಆಧಾರ ಅದು ಅವನ ಸಿದ್ಧಾಂತಗಳನ್ನೇ ವಿರೋಧಿಸುತ್ತದೆ, ಹಾಗಾಗಿ ಅದು ಸತ್ಯವಾಗಿರುವುದಿಲ್ಲ. ಇನ್ನೊಂಡೆದೆಗೆ ಭಗವಂತ, ಅವನ ಕೃಪೆ, ಯೋಗ, ಗುರು ಇತ್ಯಾದಿಗಳಲ್ಲಿರುವ ನೆಚ್ಚಿಕೆ, ಇದು ಅನುಭವದ ಆವಶ್ಯಕತೆ ಇಲ್ಲದೆ ತರ್ಕದಿಂದ ಆಗಿರುವುದಿಲ್ಲ, ಏಕೆಂದರೆ ಅದು ಮಾನವ ಅನುಭವದ ಶ್ರೇಷ್ಠ ಮೊತ್ತದ ಆಧಾರ ಪಡೆದಿರುತ್ತದೆ, ಶತಮಾನಗಳ ಕಾಲದಿಂದ, ಸಹಸ್ರಾರು ವರ್ಷಗಳಿಂದ ಆ ಅನುಭವ ಸಂಗ್ರಹವಾಗುತ್ತ ಬಂದಿದೆ, ಅದರ ಜೊತೆಗೆ ವ್ಯಕ್ತಿಗತ ಅಂತರ್ಬೋಧೆಯ ಗ್ರಹಿಕೆಯಿದೆ. ಆದ್ದರಿಂದ ಅದು ಅಂತರ್ಬೋಧೆಯ ಗ್ರಹಿಕೆ, ಅದನ್ನು ನನಗಿಂತ ಮೊದಲು ಇದ್ದ ಸಹಸ್ರಾರು ಜನರ ಅನುಭವದಿಂದ ದೃಢಪಡಿಸಲಾಗಿದೆ, ಪರೀಕ್ಷೆಗೆ ಒಳಪಡಿಸಲಾಗಿದೆ.

**CWSA, 28/347** **– ಶ್ರೀ ಅರವಿಂದರು**

*

**ನಂಬಿಕೆ ಆಂತರಿಕ ಸತ್ತೆಯ ಅಂತರ್ಬೋಧೆ**

ನಂಬಿಕೆ ಬಾಹ್ಯ ವಾಸ್ತವತೆಗಳಲ್ಲಿರಿಸುವ ಮಾನಸಿಕ ನೆಚ್ಚಿಕೆ(belief)ಯಲ್ಲ, ಆದರೆ ಅದು ಆಧ್ಯಾತ್ಮಿಕ ವಿಷಯಗಳನ್ನು ಕುರಿತು ಆಂತರಿಕ ಸತ್ತೆಯ ಅಂತರ್ಬೋಧೆ. ನಂಬಿಕೆಯನ್ನು ಕುರಿತು ಶ್ರೀ ರಾಮಕೃಷ್ಣರು ಉಪಯೋಗಿಸಿದ **"ಕುರುಡು"** ಎಂಬ ವಿಶೇಷಣ ಕುರಿತು ಹೇಳುವುದಾದರೆ, ನಾನು ಹೇಳಿದ ಹಾಗೆ ಅದು ಅಜ್ಞಾನದಿಂದ ವಿಚಾರಶೂನ್ಯವಾದದ್ದಲ್ಲ, ಆದರೆ ಬುದ್ಧಿಮತ್ತೆಯ

ಪ್ರಶ್ನಿಸುವಿಕೆಗಳಿಂದ ತೊಂದರೆಗೊಳಗಾಗದೆ ಇರುವಂತಹದು, ವಾಸ್ತವತೆಯ ಬಾಹ್ಯ ತೋರಿಕೆಯಿಂದ ಅಲುಗಾಡದೆ ಇರುವಂತಹದು. ಉದಾಹರಣೆಗೆ ಇಲ್ಲಿರುವ ಜಗತ್ತು, ಕನಿಷ್ಠ ಪಕ್ಷ ಮಾನವ ಜಗತ್ತು ಅದೈವಿಕವಾದ ಶಕ್ತಿಗಳ ಮುಂದೂಡಿಕೆಗೆ ಒಳಗಾಗಿದೆ ಎಂದು ತೋರಿ ಬರುವ ವಾಸ್ತವ ಸಂಗತಿ ಇದ್ದಾಗ್ಯೂ ಮನುಷ್ಯನಿಗೆ ಭಗವಂತನಲ್ಲಿ ನಂಬಿಕೆ ಇರುತ್ತದೆ. ಗುರು ನಿಮ್ಮ ಅನುಭವಕ್ಕೆ ಬಂದಿರದ ವಿಧಾನಗಳನ್ನು ಉಪಯೋಗಿಸುತ್ತಾನೆ, ಅವುಗಳನ್ನು ನಿಮ್ಮ ಬುದ್ಧಿ ನಿಜವೆಂದು ಗ್ರಹಿಸಲಾಗದಂತಿರುತ್ತದೆ, ಒಪ್ಪಿಕೊಳ್ಳಲಾಗದಂತಿರುತ್ತದೆ, ಆದಾಗ್ಯೂ ಅವನನ್ನು ಗುರುವೆಂದು ಒಪ್ಪಿಕೊಂಡಿರುತ್ತೀರಿ. (ಏಕೆಂದರೆ ಅವನ ಜ್ಞಾನ ಮತ್ತು ಅನುಭವ ನಿಮ್ಮವುಗಳಿಗಿಂತ ಶ್ರೇಷ್ಠತರವಾಗಿರದಿದ್ದರೆ ಅವನನ್ನು ಗುರು ಎಂದು ಆಯ್ದುಕೊಳ್ಳುವುದೇಕೆ?) ಗುರಿಯತ್ತ ಕರೆದೊಯ್ಯುವ ದೈವೀ ಮಾರ್ಗದ ಮೇಲೆ ಮನುಷ್ಯನಿಗೆ ನಂಬಿಕೆ ಇರುತ್ತದೆ. ಆ ಗುರಿ ಬಹಳ ದೂರವಿರಬಹುದು, ಅದರತ್ತ ದಾರಿ ಮಂಜಿನಿಂದ ಮೋಡದಿಂದ ಆವೃತವಾಗಿರ–ಬಹುದು, ಮತ್ತು ಮೇಲಿಂದ ಮೇಲೆ ಮಿಂಚು ಗುಡುಗಿನ ಹೊಡೆತವಿರಬಹುದು. ಇದೆಲ್ಲ ಇದ್ದಾಗ್ಯೂ ಅವನು ಮುಂದುವರಿದುಕೊಂಡು ಹೋಗುತ್ತಾನೆ. ಪ್ರಾಪಂಚಿಕ ವಿಷಯಗಳಲ್ಲಿಯೂ ಕೂಡ, ಮನುಷ್ಯನಲ್ಲಿ ನಂಬಿಕೆ ಇಲ್ಲದಿದ್ದರೆ ಅವನು ಶ್ರೇಷ್ಠವಾದ ಏನನ್ನೂ ಮಾಡಲಾರ – ಆಧ್ಯಾತ್ಮಿಕ ಪ್ರಾಂತದಲ್ಲಿ ಅದು (ನಂಬಿಕೆ) ಇನ್ನೂ ಹೆಚ್ಚು ಅತ್ಯಗತ್ಯದ್ದಾಗಿರುತ್ತದೆ.

**CWSA, 28/344–345** **– ಶ್ರೀ ಅರವಿಂದರು**

*

**ನಂಬಿಕೆ ಒರಟಾದ ಮಾನಸಿಕ ನೆಚ್ಚಿಕೆಯಲ್ಲ**

ಏನನ್ನಾದರೂ, ಪ್ರತಿಯೊಂದನ್ನೂ ನೆಚ್ಚಿಕೊಳ್ಳುವುದನ್ನು ನಿಶ್ಚಿತವಾಗಿ ಆಧ್ಯಾತ್ಮಿಕ ಅನ್ವೇಷಕನಿಂದ ಒತ್ತಾಯಪೂರ್ವಕವಾಗಿ ಬೇಡಲಾಗುವುದಿಲ್ಲ. ಇಂತಹ ಸ್ವಚ್ಛಂದ, ದುರ್ಬಲ ಮನಸ್ಸಿನ ಅವಿಚಾರಿತ ನಂಬಿಕೆ, ಬೌದ್ಧಿಕವಾಗಿರುವುದಿಲ್ಲವಷ್ಟೇ ಅಲ್ಲ, ಕೊನೆಯ ಹಂತದಲ್ಲಿ ಆಧ್ಯಾತ್ಮಿಕವಲ್ಲದ್ದಾಗಿರುತ್ತದೆ. ಆಧ್ಯಾತ್ಮಿಕ ಜೀವನದ ಪ್ರತಿಯೊಂದು ಕ್ಷಣದಲ್ಲಿ, ಮನುಷ್ಯ ಪೂರ್ತಿಯಾಗಿ ಉಚ್ಚತರ ದೈವೀ ಪ್ರಕಾಶದಲ್ಲಿ ಪ್ರವೇಶ ಪಡೆಯದೆ ಇರುವವರೆಗೆ ಅವನು ತನ್ನ ಮೇಲೆ ಕಾವಲಿರಿಸಿ–ಕೊಂಡಿರಬೇಕು. ಮತ್ತು ಆಧ್ಯಾತ್ಮಿಕ ಸತ್ಯ ಹಾಗೂ ಕೃತಕ ಆಧ್ಯಾತ್ಮಿಕ ಅನುಕರಣೆ ಇಲ್ಲವೆ ಅವುಗಳ ಬದಲಾಗಿ ಮನಸ್ಸು, ಪ್ರಾಣಿಕ ಆಸೆ ಏರ್ಪಡಿಸಿದವುಗಳಿಂದ

ಬಂದವುಗಳು ಇವುಗಳಲ್ಲಿರುವ ಭೇದವನ್ನು ಗುರುತಿಸಲು ಶಕ್ತನಾಗಿರಬೇಕು. ದೈವೀ ಸತ್ಯ ಮತ್ತು ಅಸುರನಿರಿಸಿದ ಮಿಥ್ಯೆ ಇವುಗಳ ನಡುವಿನ ವ್ಯತ್ಯಾಸವನ್ನು ಗುರುತಿಸುವುದು ಯೋಗಕ್ಕಾಗಿ ಪ್ರಧಾನ ಆವಶ್ಯಕತೆಯಾಗಿರುತ್ತದೆ. ಇರುವ ಪ್ರಶ್ನೆ ಎಂದರೆ ಅದನ್ನು ಸಂಶಯದ ನಕಾರಾತ್ಮಕ, ನಾಶಮಾಡುವ ವಿಧಾನದಿಂದ ಕೈಕೊಳ್ಳಬೇಕೋ ಎಂಬುದಾಗಿದೆ, ಹಾಗೆ ಕೈಕೊಂಡರೆ ಅದು ಬಹಳಷ್ಟು ಸಲ ಮಿಥ್ಯೆಯನ್ನು ನಾಶಮಾಡುತ್ತದೆ, ಆದರೆ ಸತ್ಯವನ್ನು ಅದೇ ಪಕ್ಷಪಾತರಹಿತ ರೀತಿಯಿಂದ ಸತ್ಯಕ್ಕೆ ಹೊಡೆತ ಕೊಟ್ಟು ಅದನ್ನು ತಿರಸ್ಕರಿಸುತ್ತದೆ. ಅದನ್ನು ಅತ್ಯಂತ ಒಳ್ಳೆಯ ರೀತಿಯಲ್ಲಿ ಕೈಕೊಳ್ಳುವುದಕ್ಕಾಗಿ ಧನಾತ್ಮಕವಾದ, ಸಹಾಯಕವಾದ, ಪ್ರಕಾಶಮಯ ಶೋಧಕ ಸಾಮರ್ಥ್ಯವನ್ನು ಕಂಡುಹಿಡಿಯಬಹುದು, ಸತ್ಯ ಮತ್ತು ಮಿಥ್ಯೆ ಇವುಗಳನ್ನು ಸಂಶಯದ ಕಠಾರಿಯಿಂದ ಮತ್ತು ನಿರಾಕರಣೆಯ ದೊಣ್ಣೆಯಿಂದ ಭೇಟಿಮಾಡಲು ಅದು ಅಂತರ್ನಿಹಿತ ಅಜ್ಞಾನದಿಂದ ಒತ್ತಾಯ-ಕ್ಕೊಳಗಾಗಿರುವುದಿಲ್ಲ. ಮಾನಸಿಕ ನೆಚ್ಚಿಕೆಯ ವಿವೇಚನಾರಾಹಿತ್ಯವು ಆಧ್ಯಾತ್ಮಿಕತೆಯ ಇಲ್ಲವೆ ಯೋಗದ ಬೋಧನೆಯಲ್ಲ, ಅದು ಹೇಳುವ ನಂಬಿಕೆ ಒರಟಾದ ಮಾನಸಿಕ ನೆಚ್ಚಿಕೆಯಲ್ಲ, ಆದರೆ ಅದು ಆತ್ಮದೊಳಗಿರುವ ಮಾರ್ಗದರ್ಶಕ ಪ್ರಕಾಶಕ್ಕೆ ತತ್ವನಿಷ್ಠೆ, ಆ ಪ್ರಕಾಶ ಜ್ಞಾನದಲ್ಲಿ ಕೊಂಡೊಯ್ಯುವವರೆಗೆ ಆ ತತ್ವನಿಷ್ಠೆ ಉಳಿದುಕೊಳ್ಳಬೇಕಾಗಿರುತ್ತದೆ.

**CWSA, 28/342** – ಶ್ರೀ ಅರವಿಂದರು

*

**ನಂಬಿಕೆ ಅನುಭವದ ಮೇಲೆ ಅವಲಂಬಿಸಿರುವುದಿಲ್ಲ**

ನಿನ್ನಲ್ಲಿ ಇಲ್ಲ ಮತ್ತು ಅನುಭವ ಇಲ್ಲದೆ ಇದ್ದಾಗ ಅದನ್ನು ಹೊಂದಲು ಸಾಧ್ಯವಿಲ್ಲ ಎಂದು ನೀನು ಹೇಳುತ್ತಿರುವ ನಂಬಿಕೆ ಬಗ್ಗೆ ನಾನು ಒಂದಿಷ್ಟನ್ನು ಹೇಳಲು ಬಯಸುತ್ತೇನೆ. ಮೊದಲನೆಯದಾಗಿ ನಂಬಿಕೆ ಅನುಭವದ ಮೇಲೆ ಅವಲಂಬಿಸಿರುವುದಿಲ್ಲ. ಅದು ಅನುಭವಕ್ಕಿಂತ ಮೊದಲು ಇರುವಂತಹ ಏನೋ ಒಂದು. ಮನುಷ್ಯ ಯೋಗ ಕೈಕೊಳ್ಳಲು ಪ್ರಾರಂಭಿಸಿದಾಗ, ಅದು ಸಾಮಾನ್ಯವಾಗಿ, ಅನುಭವದ ಬಲದಿಂದಾಗಿರುವುದಿಲ್ಲ, ಆದರೆ ನಂಬಿಕೆಯ ಬಲದಿಂದಾಗಿರುತ್ತದೆ. ಇದು ಯೋಗದಲ್ಲಿ ಹಾಗೂ ಆಧ್ಯಾತ್ಮಿಕ ಜೀವನದಲ್ಲಿ ಹಾಗಿದೆಯಷ್ಟೇ ಅಲ್ಲ, ಆದರೆ ಸರ್ವಸಾಧಾರಣ ಜೀವನದಲ್ಲಿಯೂ ಕೂಡ ಹಾಗಿರುತ್ತದೆ. ಕ್ರಿಯಾಶೀಲರಾದವರು, ಶೋಧಕರು, ಅನ್ವೇಷಕರು, ಜ್ಞಾನವನ್ನು ಸೃಷ್ಟಿಸುವವರು ನಂಬಿಕೆಯಿಂದ

ಮುಂದುವರಿಯುತ್ತಾರೆ, ಮತ್ತು ಪ್ರಮಾಣ (proof) ಸಿದ್ಧವಾಗುವವರೆಗೆ ಇಲ್ಲವೆ ಕಾರ್ಯ ಮುಕ್ತಾಯವಾಗುವವರೆಗೆ ಅವರು ಎಲ್ಲ ನಿರಾಶೆ, ವಿಫಲತೆ, ತಪ್ಪೆನ್ನುವ ಪುರಾವೆ, ನಿರಾಕರಣೆ ಇವೆಲ್ಲ ಇದ್ದಾಗ್ಯೂ ಮುಂದುವರಿಯುತ್ತ ಸಾಗುತ್ತಾರೆ, ಏಕೆಂದರೆ ಅವರ ಅಂತರಂಗದಲ್ಲಿ ಅದು ಸತ್ಯವೆಂದು, ಅನುಸರಿಸಬೇಕಾದ ಹಾಗೂ ಮುಕ್ತಾಯಗೊಳಿಸಬೇಕಾದ ಕಾರ್ಯವೆಂದು ಹೇಳುವ ಏನೋ ಒಂದಿರುತ್ತದೆ. ಕುರುಡು ನಂಬಿಕೆ ತಪ್ಪಾದದ್ದಲ್ಲವೆ ಎಂದು ಶ್ರೀ ರಾಮಕೃಷ್ಣರನ್ನು ಕೇಳಿದಾಗ ಹೊಂದಬೇಕಾದ ಏಕಮಾತ್ರ ನಂಬಿಕೆ ಕುರುಡಾದದ್ದೇ ಇರಬೇಕು ಎಂದು ಹೇಳಿದರು. ಏಕೆಂದರೆ ನಂಬಿಕೆ ಕುರುಡಾಗಿರುತ್ತದೆ ಇಲ್ಲವೆ ಅದು ನಂಬಿಕೆಯಾಗಿರುವುದಿಲ್ಲ, ಆದರೆ ಬೇರೇ ಏನೋ ಆಗಿರುತ್ತದೆ – ತರ್ಕಬದ್ಧ ತೀರ್ಮಾನ, ಪ್ರಮಾಣೀಕರಿಸಿದ ಮನವರಿಕೆ, ಇಲ್ಲವೆ ಖಚಿತಪಡಿಸಿದ ಜ್ಞಾನವಾಗಿರುತ್ತದೆ.

**CWSA, 29/92–94** **– ಶ್ರೀ ಅರವಿಂದರು**

*

**ಅನುಭವಗಳು ಅವಶ್ಯವಾಗಿ ನಂಬಿಕೆಯತ್ತ ಕರೆದೊಯ್ಯುವುದಿಲ್ಲ**

ನಂಬಿಕೆಗಾಗಿ ಅನುಭವಗಳು ಅವಶ್ಯವಾಗಿರುವುದನ್ನು ಕುರಿತು ಹೇಳುವುದಾದರೆ, ಅನುಭವವಿಲ್ಲದೆ ನಂಬಿಕೆಯಿರುವುದಿಲ್ಲ ಎಂದು ಹೇಳಿದರೆ ಅದು ಒಟ್ಟಿನಲ್ಲಿ ಮಾನವ ಮನೋವಿಜ್ಞಾನಕ್ಕೆ ವಿರುದ್ಧವಾಗಿರುತ್ತದೆ. ಸಾವಿರಾರು ಜನರು ಅನುಭವ ತಂದುಕೊಳ್ಳುವುದಕ್ಕಿಂತ ಮೊದಲು ನಂಬಿಕೆ ಹೊಂದಿರುತ್ತಾರೆ ಮತ್ತು ನಂಬಿಕೆಯೇ ಅವರಿಗೆ ಅನುಭವ ತಂದುಕೊಳ್ಳಲು ಸಹಾಯ ಮಾಡುತ್ತದೆ. "ಪ್ರಮಾಣೀಕರಿಸದೆ ನೆಚ್ಚಿಕೆ ಸಾಧ್ಯವಿಲ್ಲ" ಎಂಬ ಸಿದ್ಧಾಂತ ಭೌತಿಕ ವಿಜ್ಞಾನಕ್ಕೆ ಅನ್ವಯಿಸುತ್ತದೆ, ಅದು ಆಧ್ಯಾತ್ಮಿಕ ಕ್ಷೇತ್ರದಲ್ಲಿ ಅನರ್ಥಕಾರಕವಾದದ್ದು. – ಆ ವಿಷಯದಲ್ಲಿ ಅದು ಮಾನವ ಕ್ರಿಯೆಯಲ್ಲಿಯೂ ಹಾಗಿರುತ್ತದೆ. ಸಂತರು, ಭಕ್ತರು ಭಗವಂತನನ್ನು ಕುರಿತು ಅನುಭವ ಪಡೆಯುವುದಕ್ಕಿಂತ ಸಾಕಷ್ಟು ಮೊದಲು ಅವನಲ್ಲಿ ನಂಬಿಕೆ ಹೊಂದಿರುತ್ತಾರೆ. ಕ್ರಿಯಾಶೀಲ ಮನುಷ್ಯ ಕೈಕೊಂಡದ್ದರಲ್ಲಿ ಯಶಸ್ಸಿನ ಕಿರೀಟ ದೊರಕಿಸುವುದಕ್ಕಿಂತ ಬಹಳ ಮೊದಲೇ ಅದರ ಉದ್ದೇಶದಲ್ಲಿ ನಂಬಿಕೆ ಇಟ್ಟುಕೊಂಡಿರುತ್ತಾನೆ. ಹಾಗಿಲ್ಲದಿದ್ದರೆ ಅವನಂತಹ ಜನರು ಸೋಲು, ವಿಫಲತೆ, ಮಾರಕ ಅಪಾಯಗಳಿದ್ದಾಗ್ಯೂ ತಮ್ಮ ಗುರಿಯತ್ತ ಪಟ್ಟು ಹಿಡಿದು ಹೆಣಗುವುದಕ್ಕೆ ಶಕ್ತರಾಗುತ್ತಿರಲಿಲ್ಲ. ಕೃಷ್ಣಪ್ರೇಮ 'ನಿಜವಾದ ನಂಬಿಕೆ' ಎಂದು

ಯಾವ ಅರ್ಥದಲ್ಲಿ ಹೇಳಿದ್ದಾರೆ ಎಂಬುದು ನನಗೆ ತಿಳಿದಿಲ್ಲ. ನನಗೆ ನಂಬಿಕೆ ಬೌದ್ಧಿಕ ನೆಚ್ಚಿಕೆಯಲ್ಲ, ಆದರೆ ಆತ್ಮದ ಕಾರ್ಯ ವಿಧಾನ; ನನ್ನ ನೆಚ್ಚಿಗೆ ಹಿಂದೆಗೆದಾಗ, ವಿಫಲಗೊಂಡಾಗ, ಹೊರಗೆ ಹೊರಟು ಹೋದಾಗ ಆತ್ಮ ಏಕಪ್ರಕಾರದಲ್ಲಿ, ಹಟಮಾರಿತನದಿಂದ "ಈ ಮಾರ್ಗವಲ್ಲದೆ ಬೇರೊಂದಿಲ್ಲ ಮನಸ್ಸು ನೆಚ್ಚಿಕೊಳ್ಳಲಿ ಇಲ್ಲವೆ ನೆಚ್ಚಿಕೊಳ್ಳದೇ ಇರಲಿ ನನ್ನ ಭಾವನೆಗೆ ಬಂದ ದೈವೀ ಸತ್ಯವೇ ದೈವೀ ಸತ್ಯ" ಎಂದು ಹೇಳುತ್ತ ಉಳಿದುಕೊಂಡಿದೆ. ಇನ್ನೊಂದೆಡೆಗೆ ಅನುಭವಗಳು ಅವಶ್ಯವಾಗಿ ನಂಬಿಕೆಯತ್ತ ಕರೆದೊಯ್ಯುವುದಿಲ್ಲ. ಒಬ್ಬ ಸಾಧಕ ನನಗೆ ಬರೆದ ಪತ್ರದಲ್ಲಿ ಇದ್ದದ್ದು ಹೀಗಿದೆ: "ಶ್ರೀಮಾತೆಯವರ ದೈವೀ ಕೃಪೆ ನನ್ನೊಳಗೆ ಇಳಿದು ಬರುತ್ತಿರುವ ಭಾವನೆ ನನಗೆ ಬರುತ್ತದೆ, ಆದರೆ ಅದನ್ನು ನಾನು ನೆಚ್ಚಿಕೊಳ್ಳಲಾರೆ, ಏಕೆಂದರೆ ಅದು ಪ್ರಾಣಿಕ ಕಲ್ಪನೆಯಾಗಿರಬಹುದು." ಇನ್ನೊಬ್ಬನಿಗೆ ಹಲವಾರು ವರ್ಷಗಳ ಕಾಲ ಅನುಭವಗಳಾಗುತ್ತಿದ್ದವು, ನಂತರ ಅವನು ಪತನಗೊಂಡ, ಏಕೆಂದರೆ "ನಾನು ನಂಬಿಕೆ ಕಳೆದುಕೊಂಡಿದ್ದೇನೆ" ಎಂದು ಹೇಳುತ್ತಾನೆ. ಈ ಎಲ್ಲ ವಿಷಯಗಳು ನನ್ನ ಕಲ್ಪನೆಯಿಂದ ಬಂದವುಗಳಲ್ಲ, ಅವು ವಾಸ್ತವ ವಿಷಯಗಳಾಗಿದ್ದು ತಮ್ಮ ಕತೆಯನ್ನು ಹೇಳುತ್ತವೆ.

**CWSA, 29/94–95** **– ಶ್ರೀ ಅರವಿಂದರು**

*

## ನಂಬಿಕೆ ಮತ್ತು ದೈವೀ ಜ್ಞಾನ

ನಾವು ದೈವೀ ಸತ್ಯವನ್ನು ಅರಿತುಕೊಳ್ಳುವವರೆಗೆ (ಕೇವಲ ಮಾನಸಿಕವಾಗಿ ಅಲ್ಲ, ಅನುಭವದ ಮೂಲಕ, ಪ್ರಜ್ಞೆಯ ಬದಲಾವಣೆಯ ಮೂಲಕ) ನಮಗೆ ಆತ್ಮದ ನಂಬಿಕೆಯ ಆವಶ್ಯಕತೆ ಇದೆ, ಅದು ದೈವೀ ಸತ್ಯವನ್ನು ಹಿಡಿದಿಟ್ಟು–ಕೊಳ್ಳುವುದಕ್ಕಾಗಿ ನಮ್ಮನ್ನು ಪೋಷಿಸಿಕೊಂಡು ಬರುವುದಕ್ಕಾಗಿ ಬೇಕಾಗಿರುತ್ತದೆ – ಆದರೆ ನಾವು ಜ್ಞಾನದಲ್ಲಿ ಜೀವಿಸುತ್ತಿದ್ದಾಗ ಈ ನಂಬಿಕೆ ಜ್ಞಾನವಾಗಿ ಬದಲಾಗುತ್ತದೆ.

ಸಹಜವಾಗಿ ನಾನು ನೇರವಾದ ಆಧ್ಯಾತ್ಮಿಕ ಜ್ಞಾನ ಕುರಿತು ಹೇಳುತ್ತಿದ್ದೇನೆ. ಮಾನಸಿಕ ಜ್ಞಾನ ನಂಬಿಕೆಯ ಸ್ಥಾನದಲ್ಲಿ ಬರಲಾರದು, ಕೇವಲ ಮಾನಸಿಕ ಜ್ಞಾನ ಅಲ್ಲಿರುವವರೆಗೆ ನಂಬಿಕೆಯ ಆವಶ್ಯಕತೆ ಇನ್ನೂ ಇರುತ್ತದೆ.

**CWSA, 29/91–92** **– ಶ್ರೀ ಅರವಿಂದರು**

*

**ನಂಬಿಕೆ, ಸಮರ್ಥನೆಗಳು ಮತ್ತು ಅಸಹನೆ**

ನೀನು ನಂಬಿಕೆಯನ್ನು ಹೆಚ್ಚಿನ ರೀತಿಯಲ್ಲಿ ಮಾನಸಿಕ ನೆಚ್ಚಿಕೆಯೊಂದಿಗೆ ಗುರುತಿಸುತ್ತಿರುವಂತೆ ತೋರಿಬರುತ್ತದೆ – ಆದರೆ ನಿಜವಾದ ನಂಬಿಕೆ ಆಧ್ಯಾತ್ಮಿಕವಾದ ಏನೋ ಒಂದು, ಅದು ಆತ್ಮದ ಜ್ಞಾನ. ನಿನ್ನ ಪತ್ರದಲ್ಲಿ ಉಲ್ಲೇಖಿಸಿದ ಸಮರ್ಥನೆಗಳು ಮಾನಸಿಕ ನೆಚ್ಚಿಕೆಯ ದೃಢವಾದ ಸಮರ್ಥನೆಗಳು, ಅವು ಮನುಷ್ಯನ ಪಂಥ ಹಾಗೂ ದೇವ ಇವುಗಳನ್ನು ಕುರಿತು ಶ್ರೇಷ್ಠ ಭಾವೋದ್ವೇಗವಿರುವ ಸಮರ್ಥನೆಯತ್ತ ಕರೆದೊಯ್ಯುತ್ತವೆ, ಏಕೆಂದರೆ ಅವು ಅವನವೇ ಆಗಿರುತ್ತವೆ ಮತ್ತು ಆ ಕಾರಣದಿಂದಾಗಿ ಇತರರವುಗಳಿಗಿಂತ ಶ್ರೇಷ್ಠತರವಾಗಿರುತ್ತವೆ – ಈ ಮನೋಭಾವ ಮಾನವ ಸ್ವಭಾವದಲ್ಲಿ ವಿಶ್ವಂಭರವಾಗಿರುತ್ತದೆ. ನಾಸ್ತಿಕನೂ ಕೂಡ ಸಹಿಷ್ಣುವಾಗಿರುವುದಿಲ್ಲ, ಆದರೆ ಪ್ರಕೃತಿ ಮತ್ತು ಭೌತದ್ರವ್ಯ ಕುರಿತು ತನ್ನ ಏಕೈಕ ಸತ್ಯ(credo)ವನ್ನು ಸಾರಿ ಹೇಳುತ್ತಾನೆ, ಅದನ್ನು ನೆಚ್ಚಿಕೊಳ್ಳದೇ ಇದ್ದವರ ಮೇಲೆ ಇಲ್ಲವೆ ಬೇರೆ ವಿಷಯಗಳನ್ನು ನೆಚ್ಚಿಕೊಂಡವರ ಮೇಲೆ ತನ್ನ ಜರಿತವನ್ನು ಸುರಿಸುತ್ತಾನೆ, ಅವರು ಜ್ಞಾನೋದಯ ಪಡೆದಿರದ ಮಂದಬುದ್ಧಿಯವರು ಮತ್ತು ಮೂಢನಂಬಿಕೆಯಿರುವ ಅರೆಬುದ್ಧಿ–ಯುಳ್ಳವರು ಎಂದು ಹೇಳುತ್ತಾನೆ. ನನ್ನನ್ನು ಅವರಲ್ಲೊಬ್ಬನೆಂದು ಅವನು ಯೋಚಿಸಿದರೆ ನನಗೇನೂ ಅಸಮಾಧಾನವಿರುವುದಿಲ್ಲ, ಆದರೆ ನಾನು ಹೇಳುವುದೇನೆಂದರೆ ಈ ಮನೋಭಾವ ಧಾರ್ಮಿಕ ಪಂಥದ ನಂಬಿಕೆಗಳಿಗಷ್ಟೇ ಸೀಮಿತವಾಗಿರುವುದಿಲ್ಲ, ಆದರೆ ಧಾರ್ಮಿಕ ನಂಬಿಕೆಯಿಂದ ಮುಕ್ತರಾದವರಿಗೆ ಅಷ್ಟೇ ಅಲ್ಲ ಮತ್ತು ದೇವರುಗಳನ್ನು ಹಾಗೂ ಗುರುಗಳನ್ನು ನೆಚ್ಚಿಕೊಳ್ಳದೇ ಇದ್ದವರಿಗೂ ಸಮನಾಗಿ, ಸ್ವಾಭಾವಿಕವಾಗಿ ಅನ್ವಯಿಸುತ್ತದೆ.

**CWSA, 28/432** – **ಶ್ರೀ ಅರವಿಂದರು**

*


**ಭಗವಂತನ ಮೇಲೆ ಭರವಸೆ ಇಟ್ಟುಕೊಂಡಿರುವುದು ಸೋಮಾರಿತನಕ್ಕೆ ಒಂದು ನೆಪವಾಗಬಾರದು**

ನಂಬಿಕೆ, ಭಗವಂತನ ಮೇಲೆ ಭರವಸೆ ಇಟ್ಟುಕೊಂಡಿರುವಿಕೆ, ಶರಣಾಗತಿ, ಮತ್ತು ದೈವೀ ಸಾಮರ್ಥ್ಯಕ್ಕೆ ಸ್ವ–ಸಮರ್ಪಣೆ ಇವು ಅವಶ್ಯವಾಗಿವೆ ಮತ್ತು ಅತ್ಯಗತ್ಯವಾಗಿವೆ. ಆದರೆ ಭಗವಂತನ ಮೇಲಿರಿಸಿದ ಭರವಸೆಯನ್ನು

ಸೋಮಾರಿತನಕ್ಕಾಗಿ, ದೌರ್ಬಲ್ಯಕ್ಕಾಗಿ ಮತ್ತು ನಿಮ್ನತರ ಪ್ರಚೋದನೆಗಳಿಗೆ ಶರಣಾಗುವುದಕ್ಕಾಗಿ ಒಂದು ನೆಪವನ್ನಾಗಿ ಮಾಡಬಾರದು, ಅದು ದಣಿವಿಲ್ಲದ ಅಭೀಪ್ಸೆಯೊಂದಿಗೆ ಮತ್ತು ದೈವೀ ಸತ್ಯದ ಮಾರ್ಗದಲ್ಲಿ ಬರುವ ಎಲ್ಲವನ್ನು ಪಟ್ಟುಹಿಡಿದು ನಿರಾಕರಿಸುವುದರೊಂದಿಗೆ ಸಾಗಿ ಹೋಗಬೇಕು. ಭಗವಂತನಿಗೆ ಮಾಡಿಕೊಂಡಿರುವ ಶರಣಾಗತಿಯನ್ನು ಒಂದು ನೆಪವಾಗುವಂತೆ, ಆವರಣವಾಗುವಂತೆ ಇಲ್ಲವೆ ತನ್ನದೇ ಆಸೆಗಳು ಮತ್ತು ನಿಮ್ನತರ ಚಲನೆಗಳಿಗೆ ಇಲ್ಲವೆ ಅಹಂಕಾರಕ್ಕೆ ಇಲ್ಲವೆ ಭಗವಂತನನ್ನು ಕುರಿತು ಮಿಥ್ಯೆಯ, ಅಜ್ಞಾನದ ಅಂಧಕಾರದ ತೋರಿಕೆಯತ್ತ ಹೊರಳಿಸುವಂತೆ ಮಾಡಬಾರದು.

**CWSA, 29/87** **– ಶ್ರೀ ಅರವಿಂದರು**

*



“ಯಾವ ಭಕ್ತನೇ ಆಗಲಿ ನನ್ನ ಯಾವುದೇ ರೂಪವನ್ನು ನಂಬಿಕೆಯಿಂದ ಪೂಜಿಸಲು ಬಯಸುತ್ತಾನೋ ಅವನ ಆ ನಂಬಿಕೆಯನ್ನು ಸ್ಥಿರವಾದದ್ದನ್ನಾಗಿ, ದಾರಿ ತಪ್ಪಿಹೋಗದಂತಹದನ್ನಾಗಿ ಮಾಡುತ್ತೇನೆ.” ಆ ನಂಬಿಕೆಯ ಶಕ್ತಿಯಿಂದ ಅವನ ಆರಾಧನಾ ಪದ್ಧತಿಯಿಂದ ಹಾಗೂ ಪೂಜೆಯಿಂದ ಅವನು ಬಯಸಿದ್ದನ್ನು ಮತ್ತು ಸದ್ಯದ ಕ್ಷಣದಲ್ಲಿ ಸ್ವೀಕರಿಸಲು ಅರ್ಹವಾಗಿರುವಷ್ಟು ಆಧ್ಯಾತ್ಮಿಕ ಸಿದ್ಧಿಯನ್ನು ಪಡೆಯುತ್ತಾನೆ.

**CWSA, 19/287** **– ಶ್ರೀ ಅರವಿಂದರು**

*

# ನಂಬಿಕೆ ಮತ್ತು ಸಂಶಯ

## ನಂಬಿಕೆ ಹಾಗೂ ತಾಳ್ಮೆ ಇವು ಮೊದಲ ಆವಶ್ಯಕತೆಗಳು

ಎಲ್ಲ ಯೋಗದಲ್ಲಿ ನಂಬಿಕೆ ಹಾಗೂ ತಾಳ್ಮೆ ಇವು ಮೊದಲ ಆವಶ್ಯಕತೆಗಳಾಗಿರುತ್ತವೆ.

ಮನುಷ್ಯನ ಪ್ರಾಣಿಕ ಸ್ವಭಾವ ಯಾವಾಗಲೂ ತನ್ನ ಶ್ರಮಕ್ಕೆ ಫಲ ದೊರಕಿಸುವ ಹಸಿವನ್ನು ಹೊಂದಿರುತ್ತದೆ ಮತ್ತು ಫಲವನ್ನು ನಿರಾಕರಿಸಲಾಗುತ್ತದೆ ಇಲ್ಲವೆ ಫಲ ನೀಡುವುದನ್ನು ಬಹಳ ಮುಂದೂಡಲಾಗುತ್ತದೆ ಎಂದು ತೋರಿಬಂದಾಗ ಮನುಷ್ಯ ಅದರ್ಶದಲ್ಲಿ ಹಾಗೂ ಮಾರ್ಗದರ್ಶನದಲ್ಲಿ ನಂಬಿಕೆ ಕಳೆದುಕೊಳ್ಳುತ್ತಾನೆ. ... ನಾವು ದೀರ್ಘಕಾಲ ವೇದನೆಗೊಳಗಾದಾಗ ಇಲ್ಲವೆ ಅಂಧಕಾರದಲ್ಲಿ ಎಡವಿದಾಗ ಇಲ್ಲವೆ ನಮ್ಮೆದುರಿಗೆ ಇರಿಸಿಕೊಂಡ ಆದರ್ಶವನ್ನು ಪ್ರಮಾಣಪೂರ್ವಕವಾಗಿ ತ್ಯಜಿಸಬೇಕಾದಾಗ ನಮ್ಮ ಹೃದಯಗಳಲ್ಲಿ ದೇವನನ್ನು ದೂಷಿಸುವುದಕ್ಕಿಂತ ಹೆಚ್ಚು ಸುಲಭವಾದದ್ದು ಬೇರಾವುದೂ ಇರುವುದಿಲ್ಲ. ಏಕೆಂದರೆ ನಾವು ಹೇಳುತ್ತೇವೆ: "ನಾನು ಅತ್ಯುಚ್ಚವಾದುದರಲ್ಲಿ ವಿಶ್ವಾಸವಿರಿಸಿದ್ದೆ ಮತ್ತು ನನಗೆ ವೇದನೆ, ಪಾಪ ಹಾಗೂ ದೋಷಗಳಲ್ಲಿ ಉಳಿದುಕೊಳ್ಳುವಂತೆ ದ್ರೋಹವಾಗಿದೆ." ಇಲ್ಲವೆ "ನಾನೊಂದು ವಿಚಾರದ ಆಧಾರದ ಮೇಲೆ ನನ್ನ ಇಡೀ ಜೀವನವನ್ನು ನಡೆಸಿದ್ದೆ, ಆದರೆ ಅನುಭವದ ಕಠೋರ ವಾಸ್ತವತೆಗಳು ವಿರೋಧಿಸುತ್ತವೆ ಮತ್ತು ಧೈರ್ಯಗುಂದಿಸುತ್ತವೆ. ತಮ್ಮ ಮಿತಿಗಳನ್ನು ಒಪ್ಪಿಕೊಳ್ಳುವ ಮತ್ತು ಸಾಮಾನ್ಯ ಅನುಭವದ ಸ್ಥಿರ ನೆಲಗಟ್ಟಿನ ಮೇಲೆ ನಡೆದು ಹೋಗುವ ಇತರ ಜನರಿರುವ ಹಾಗೆ ನಾನಿದ್ದುಕೊಂಡಿದ್ದರೆ ಅದು ಹೆಚ್ಚು ಒಳ್ಳೆಯದಾಗುತ್ತಿತ್ತು." ಇಂತಹ ಕ್ಷಣಗಳಲ್ಲಿ – ಅವು ಕೆಲವೊಮ್ಮೆ ಹಲವಾರು ಸಲ ಬರುತ್ತವೆ, ಧೀರ್ಘಕಾಲ ಉಳಿದುಕೊಳ್ಳುತ್ತವೆ – ಎಲ್ಲ ಉಚ್ಚತರ ಅನುಭವ ಮರೆತು ಹೋಗುತ್ತದೆ ಮತ್ತು ಹೃದಯ ತನ್ನದೇ ಕಹಿ ಅನುಭವಗಳ ಮೇಲೆ ಏಕಾಗ್ರತೆ ವಹಿಸುತ್ತದೆ. ಈ ಅಂಧಕಾರದ ಸಾಗಿ ಹೋಗುವಿಕೆಗಳಲ್ಲಿ ಕೊನೆಯವರೆಗೂ ಪತನಗೊಳ್ಳುವುದು ಇಲ್ಲವೆ ದೈವೀ ಶ್ರಮದಿಂದ ಹಿಂದೆಗೆಯುವುದು ಸಾಧ್ಯವಿದೆ.

ಮನುಷ್ಯ ದೀರ್ಘಕಾಲ, ಏಕಪ್ರಕಾರವಾಗಿ ಮಾರ್ಗದ ಮೇಲೆ ನಡೆದುಕೊಂಡು ಹೋಗಿದ್ದರೆ ಹೃದಯದ ನಂಬಿಕೆ ಅತ್ಯುಗ್ರ ವಿರೋಧೀ ಒತ್ತಡದಡಿಯಲ್ಲಿ ಉಳಿದುಕೊಳ್ಳುತ್ತದೆ, ಅದು ಮರೆಯಲ್ಲಿದ್ದರೂ, ಇಲ್ಲವೆ

ತೋರಿಕೆಗೆ ತುಳಿತಕ್ಕೊಳಗಾಗಿದ್ದರೂ ಮರಳಿ ಹೊರಹೊಮ್ಮಲು ಮೊದಲ ಅನುಕೂಲ ಸಂದರ್ಭ (opportunity)ವನ್ನು ಉಪಯೋಗಿಸುತ್ತದೆ. ಅತ್ಯಂತ ಕೆಟ್ಟ ಎಡವುವಿಕೆಗಳಿದ್ದಾಗ್ಯೂ ಮತ್ತು ಅತ್ಯಂತ ದೀರ್ಘಕಾಲದ ವಿಫಲತೆಯಿದ್ದಾಗ್ಯೂ ಹೃದಯ ಮತ್ತು ಬುದ್ಧಿಮತ್ತೆ ಇವುಗಳಿಗಿಂತ ಉಚ್ಚತರವಾದ ಏನೋ ಒಂದು ಅದನ್ನು (ಹೃದಯವನ್ನು) ಎತ್ತಿಹಿಡಿಯುತ್ತದೆ. ಆದರೆ ಅನುಭವವಿದ್ದ ಸಾಧಕನಿಗೂ ಕೂಡ ಇಂತಹ ತಡವರಿಸುವಿಕೆ, ಮಬ್ಬಾಗಿಸುವಿಕೆ ಇವುಗಳಾದ್ಯಂತ ಪ್ರಗತಿ ಹಿಂದೆ ಬೀಳುವುದನ್ನು ತರಬಲ್ಲವು, ಮತ್ತು ಅವು ಹೊಸ ಅನುಯಾಯಿ(novice)ಗೆ ಮಿತಿಮೀರಿ ಅಪಾಯಕಾರಿಯಾಗಬಲ್ಲವು. ಆದ್ದರಿಂದ ಮಾರ್ಗದ ಕಷ್ಟಸಾಧ್ಯ ತೊಂದರೆಯನ್ನು ಪ್ರಾರಂಭದಿಂದ ತಿಳಿದುಕೊಂಡಿರುವುದು ಹಾಗೂ ಒಪ್ಪಿಕೊಂಡಿರುವುದು ಅವಶ್ಯವಾಗಿರುತ್ತದೆ ಮತ್ತು ಬುದ್ಧಿಮತ್ತೆಗೆ ಅಂಥ ನಂಬಿಕೆಯೆಂದು ತೋರಿಬಹುದಾದರೂ ಅದರ ಆವಶ್ಯಕತೆಯ ಬಗ್ಗೆ ಭಾವನೆ ತಂದುಕೊಂಡಿರಬೇಕಾಗುತ್ತದೆ.

**CWSA, 23/244–45** – ಶ್ರೀ ಅರವಿಂದರು

*

**ಮಾರ್ಗದಲ್ಲಿ ಸಂದೇಹವಾದ ಹಾಗೂ ನಿರಾಕರಣೆ ಇವುಗಳಿರುವ ಮನೋಭಾವ ಅಡ್ಡಬರುತ್ತದೆ**

ಆಧ್ಯಾತ್ಮಿಕವಾದದ್ದು ಹೊಸ ಪ್ರಜ್ಞೆ, ಅದು ಉತ್ಕ್ರಾಂತಿ ಹೊಂದಬೇಕು ಮತ್ತು ಅದು ಹೊಂದುತ್ತ ಬಂದಿದೆ. ಬಹಳ ಸ್ವಾಭಾವಿಕವಾದುದೆಂದರೆ ಮೊದಲು ಮತ್ತು ಬಹಳ ಕಾಲದವರೆಗೆ ಕೇವಲ ಅತಿಕಡಿಮೆ ಜನರು ಪೂರ್ತಿ ಪ್ರಕಾಶವನ್ನು ಪಡೆಯಬೇಕು, ಅದು ಹಾಗಿರುವಾಗ ಮನುಕುಲದ ಹೆಚ್ಚಿನ ಜನರು ಆ ಪ್ರಕಾಶವನ್ನು ಭಾಗಶಃ ಪಡೆಯಬೇಕು, ಹೆಚ್ಚಿನವರಾದ ಇವರು ಮನುಕುಲದ ಜನರ ಮೊತ್ತಕ್ಕೆ ಹೋಲಿಸಿದರೆ ಇನ್ನೂ ಕಡಿಮೆ ಸಂಖ್ಯೆಯಲ್ಲಿರುತ್ತಾರೆ. ಉತ್ಕ್ರಾಂತಿಯ ಒಂದು ಹಂತದಲ್ಲಿ ಆ ಅತಿಕಡಿಮೆ ಜನರು ಗಳಿಸಿದ್ದು ಪೂರ್ಣಗೊಳ್ಳಬೇಕು ಮತ್ತು ಹೆಚ್ಚು ಸಾರ್ವತ್ರೀಕರಣಗೊಳ್ಳಬೇಕು, ಆ ಪ್ರಯತ್ನವನ್ನೇ ನಾವು ಕೈಕೊಳ್ಳುತ್ತಿದ್ದೇವೆ. ಆದರೆ ಈ ಶ್ರೇಷ್ಠತರ ಪ್ರಕಾಶದ ಪ್ರಜ್ಞೆ, ಶಾಂತಿ ಹಾಗೂ ಸಂತೋಷ ಇವುಗಳನ್ನು ಗಳಿಸಬೇಕಾದರೆ, ಅದನ್ನು ಪ್ರಶ್ನಿಸುವುದರ ಮೂಲಕ ಮತ್ತು ಸಂದೇಹವಾದದಿಂದ ಮಾಡಲಾಗದು, ಸಂದೇಹವಾದ ಇದ್ದುದಕ್ಕಿಂತ ಹಿಂದೆ ಬೀಳುವಂತೆ ಮಾಡಬಹುದು ಮತ್ತು

“ಅದು ಸಾಧ್ಯವಿಲ್ಲ, ಸಾಧ್ಯವಿಲ್ಲ – ಗತಕಾಲದಲ್ಲಿ ಇಲ್ಲದ್ದು ಭವಿಷ್ಯತ್ತಿನಲ್ಲಿ ಇರಲಾರದು, ಇನ್ನೂ ಅಷ್ಟೊಂದು ಅಪರಿಪೂರ್ಣವಾಗಿ, ಸಿದ್ಧಿಸಿಕೊಂಡದ್ದನ್ನು ಭವಿಷ್ಯತ್ತಿನಲ್ಲಿ ಹೆಚ್ಚು ಒಳ್ಳೆಯ ರೀತಿಯಲ್ಲಿ ಸಿದ್ಧಿಸಿಕೊಳ್ಳಲಾಗದು,” ಎಂದು ಹೇಳಬಹುದು. ನಂಬಿಕೆ, ಸಂಕಲ್ಪ ಇಲ್ಲವೆ ಕನಿಷ್ಠಪಕ್ಷ ಪಟ್ಟುಹಿಡಿಯುವ ಒತ್ತಾಯದ ಬೇಡಿಕೆ ಮತ್ತು ಅಭೀಪ್ಸೆ ಇವು ಅವಶ್ಯವಾಗಿವೆ. – ಕೇವಲ ಇದರಿಂದ ಮಾತ್ರ ಹಾಗೂ ಕಾರ್ಯ ಮುಗಿಯುವವರೆಗೆ ಅದರತ್ತ ಒಂದು ಮುನ್ನಡೆಯುವಿಕೆಯಿಂದ ನಾನು ಸಮಾಧಾನ ಪಡೆಯಬಹುದು. ಆ ಕಾರಣದಿಂದಾಗಿ ನಿರಾಕರಣೆ ಹಾಗೂ ಸಂದೇಹವಾದ ಇವುಗಳಿರುವ ಮನೋಭಾವ ಮಾರ್ಗದಲ್ಲಿ ಅಡ್ಡಬರುತ್ತದೆ, ಏಕೆಂದರೆ ಅವು ಆಧ್ಯಾತ್ಮಿಕ ಅನುಭವ ತನ್ನನ್ನು ತೆರೆದು ತೋರಿಸಲು ಇರುವ ಷರತ್ತುಗಳ ಸೃಷ್ಟಿಯ ವಿರುದ್ಧ ನಿಲ್ಲುತ್ತವೆ.

**CWSA, 28/271** **– ಶ್ರೀ ಅರವಿಂದರು**

*

**ಸಾಧನೆಗೆ ನಿಶ್ಚಿತವಾಗಿ ಸಾಧ್ಯವಾಗಬಹುದಾದ ಅಡೆತಡೆ**

ಯೋಗ ಬೌದ್ಧಿಕ ವಾದಕ್ಕಾಗಲಿ ಇಲ್ಲವೆ ದೀರ್ಘ ಭಾಷಣಕ್ಕಾಗಲಿ ಇರುವ ಕ್ಷೇತ್ರವಲ್ಲ. ತಾರ್ಕಿಕವಾದುದರ ಪ್ರಯೋಗದಿಂದ ಇಲ್ಲವೆ ವಾದಮಾಡಲು ಬಯಸುವ ಮನಸ್ಸಿನಿಂದ ಮನುಷ್ಯ ಯೋಗದ ಬಗ್ಗೆ ನಿಜವಾದ ತಿಳಿವಳಿಕೆಯತ್ತ ತಲುಪಲಾರ ಇಲ್ಲವೆ ಅದನ್ನು ಅನುಸರಿಸಲಾರ. ಸಂಶಯದ ಮನೋಭಾವ, “ಪ್ರಾಮಾಣಿಕ ಸಂಶಯ” ಮತ್ತು ಬುದ್ಧಿಮತ್ತೆಗೆ ಸಮಾಧಾನವಾಗಬೇಕೆಂದು ಹಕ್ಕು ಸಾಧಿಸುವಿಕೆ ಮತ್ತು ಅದನ್ನು ಪ್ರತಿಯೊಂದು ಅಂಶದ ಮೇಲೆ ತೀರ್ಪುಗಾರನನ್ನಾಗಿ ಮಾಡಬೇಕೆನ್ನುವುದು. ಇದೆಲ್ಲ ಬಾಹ್ಯದಲ್ಲಿ ನಡೆಯುವ ಮಾನಸಿಕ ಕ್ರಿಯೆಯ ಕ್ಷೇತ್ರದಲ್ಲಿ ಹೆಚ್ಚು ಸರಿಯಾದದ್ದು. ಯೋಗ ಮಾನಸಿಕ ಕ್ಷೇತ್ರವಲ್ಲ, ಸ್ಥಾಪಿಸಬೇಕಾದ ಪ್ರಜ್ಞೆ ಮಾನಸಿಕವಾದದ್ದಲ್ಲ, ತಾರ್ಕಿಕವಲ್ಲ, ಇಲ್ಲವೆ ವಾದವಿವಾದ ಮಾಡುವ ಪ್ರಜ್ಞೆಯಲ್ಲ. – ಯೋಗ ವಿಧಿಸಿದ್ದೇನೆಂದರೆ ಬೌದ್ಧಿಕ ಹಾಗೂ ತಾರ್ಕಿಕವಾದದ್ದನ್ನು ಒಳಗೊಂಡು ಎಲ್ಲ ಮನಸ್ಸನ್ನು ನಿಶ್ಚಲಗೊಳಿಸುವವರೆಗೆ ಮತ್ತು ಅದು ಅಚಂಚಲತೆಯಲ್ಲಿ ಇಲ್ಲವೆ ನಿಶ್ಚಲನೀರವತೆಯಲ್ಲಿ ತನ್ನನ್ನು ಉಚ್ಚತರ ಮತ್ತು ಆಳಾತಿ ಆಳದ ಪ್ರಜ್ಞೆಗೆ, ದರ್ಶನಕ್ಕೆ ಮತ್ತು ಜ್ಞಾನಕ್ಕೆ ತೆರೆದಿರಿಸಿಕೊಳ್ಳುವವರೆಗೆ ಸಾಧನೆ ಅದರ ಗುರಿಯನ್ನು ತಲುಪಲಾರದು. ಅದೇ ಕಾರಣಕ್ಕಾಗಿ ಭಾರತೀಯ ಆಧ್ಯಾತ್ಮಿಕ ಪರಂಪರೆಯಲ್ಲಿ ಗುರುವಿಗೆ ಪ್ರಶ್ನಿಸದೆ ಇರುವ ತೆರೆದಿರಿಸಿಕೊಳ್ಳುವಿಕೆಯನ್ನು

ಒತ್ತಾಯದಿಂದ ಬೇಡಲಾಗಿತ್ತು, ಗುರುವನ್ನು ಕುರಿತು ದೂಷಣೆ, ಟೀಕೆ ಮತ್ತು ಅವನ ಮೇಲೆ ಆಕ್ರಮಣ ಇವೆಲ್ಲವನ್ನು ಕುರಿತು ಹೇಳುವುದಾದರೆ ಅದನ್ನು ನಿಂದನೀಯ ಎಂದು ಪರಿಗಣಿಸಲಾಗುತ್ತಿತ್ತು. ಮತ್ತು ಅದು ಅತ್ಯಂತ ನಿಶ್ಚಿತವಾಗಿ ಸಾಧ್ಯವಾಗಬಹುದಾದ ಅಡೆತಡೆಯಾಗುತ್ತಿತ್ತು.

**CWSA, 28/337** – ಶ್ರೀ ಅರವಿಂದರು

*

**ಸಂಶಯದ ಮನೋಭಾವ ಮತ್ತು ವಿಚಾರಣೆಯ ಮನೋಭಾವ**

ವಾದಗಳೊಂದಿಗೆ ಎದುರಿಸುವುದರ ಮೂಲಕ ಸಂಶಯ ಮನೋಭಾವದ ಮೇಲೆ ಜಯ ಸಾಧಿಸಬಹುದು ಎನ್ನುವುದಾದರೆ ತರ್ಕದ ಮೂಲಕ ಸಮಾಧಾನ ತಂದುಕೊಳ್ಳುವುದಕ್ಕಾಗಿ ಅದನ್ನು ತೆಗೆದುಹಾಕುವುದಕ್ಕಾಗಿ, ಒತ್ತಾಯಪೂರ್ವಕ ಬೇಡಿಕೆ ಇರಿಸುವುದರಲ್ಲಿ ಏನೋ ಒಂದಿರಬೇಕು. ಆದರೆ ಸಂಶಯದ ಮನೋಭಾವ ತನ್ನ ಸಲುವಾಗಿಯೇ ಸಂಶಯ ಪಡುತ್ತದೆ, ಅದರ ವಿಶಿಷ್ಟ ಧರ್ಮಕ್ಕಾಗಿ ಮನಸ್ಸನ್ನು ತನ್ನ ಉಪಕರಣವೆಂದು ಉಪಯೋಗಿಸುತ್ತದೆ, ಇದು ಕನಿಷ್ಠವಾದುದಲ್ಲ, ಮನಸ್ಸು ನಿಷ್ಕಪಟವಾಗಿ ತನ್ನ ಪ್ರಾಮಾಣಿಕವಾದ ಮತ್ತು ಅದಮ್ಯ ಸಂಶಯಗಳಿಗೆ ಪರಿಹಾರ ಅರಸುತ್ತಿದೆ ಎಂದು ಯೋಚಿಸಿದಾಗ ಅದಿನ್ನೂ ಹೆಚ್ಚು ಕನಿಷ್ಠವಾದುದಲ್ಲ. ಮಾನಸಿಕ ಪ್ರತಿಪಾದನೆಗಳು ಯಾವಾಗಲೂ ಭಿನ್ನವಾಗಿರುತ್ತವೆ, ಅಲ್ಲದೆ ಪರಸ್ಪರರಿಗೆ ಮನವರಿಕೆ ಮಾಡಿಕೊಡದೆ ಎಂದೆಂದಿಗೂ ಜನರು ವಾದ ಮಾಡುತ್ತಲೇ ಇರುತ್ತಾರೆ ಎಂಬುದು ಸುಪರಿಚಿತ. ನಿರಂತರ ಪಟ್ಟುಹಿಡಿದು ಮತ್ತು ಯಾವಾಗಲೂ ಪುನಃ ಪ್ರಸ್ತಾಪಕ್ಕೊಳಗಾಗುವ ಸಂಶಯಗಳು ಬಹಳ ಕಾಲದಿಂದ ಈ ಆಶ್ರಮವನ್ನು ತುಂಬಿಕೊಂಡಿವೆ ಮತ್ತು ಸಾಧನೆಗೆ ಅಡೆತಡೆ ಉಂಟುಮಾಡಿವೆ. ಇಂತಹದು ಕೇವಲ ಯೋಗದ ಗುರಿಯನ್ನು ನಿಷ್ಫಲಗೊಳಿಸುವುದಾಗಿದೆ ಮತ್ತು ಪ್ರಧಾನ ತತ್ವದ ವಿರುದ್ಧ ಯಾವುದೇ ಆಧ್ಯಾತ್ಮಿಕ ಇಲ್ಲವೆ ಇತರ ಲಾಭಗಳಿಲ್ಲದೆ ಹೋಗುವುದಾಗಿದೆ. ಯಾರಿಗಾದರೂ ತಮ್ಮ ಮೂಲಭೂತ ಸಂಶಯಗಳನ್ನು ತೆಗೆದುಹಾಕಲು ಸಾಧ್ಯವಾದರೆ ಅದು ಅವರಲ್ಲಿರುವ ಚೈತ್ಯದ ಬೆಳವಣಿಗೆಯ ಮೂಲಕ ಆಗಿರುತ್ತದೆ, ಇಲ್ಲವೆ ಪ್ರಜ್ಞೆ ವಿಸ್ತಾರಗೊಂಡಿರುವುದರ ಮೂಲಕ ಆಗಿರುತ್ತದೆ, ಹಾಗಿಲ್ಲದಿದ್ದರೆ ಅದು ಸಾಧ್ಯವಾಗದು. ವಿಚಾರಣೆಯ ಮನೋಭಾವದಿಂದ ಮೇಲೆದ್ದು ಬಂದ ಪ್ರಶ್ನೆಗಳು, ಆಕ್ರಮಣಕಾರಿಯಾಗಲಿ, ಸ್ವ–ದೃಢೀಕರಣಗೊಳಿಸಿಕೊಳ್ಳುವವಾಗಲಿ

ಆಗಿರದಂತಹವು, ಆದರೆ ಜ್ಞಾನಕ್ಕಾಗಿ ಹಸಿವಿದ್ದವುಗಳು ಉತ್ತರ ನೀಡುವುದಕ್ಕೆ ಯೋಗ್ಯವಾಗಿರುತ್ತವೆ, ಆದರೆ "ಸಂಶಯದ ಮನೋಭಾವ" ತಣಿಸಲಾಗ–ದಂತಹದು, ಸಮಾಧಾನಪಡಿಸದಂತಹದು ಆಗಿರುತ್ತದೆ.

**CWSA, 28/337–38** **– ಶ್ರೀ ಅರವಿಂದರು**

*

**ಆತ್ಮ ಮತ್ತು ಮನಸ್ಸು ಇವು ಒಂದೇ ವಿಷಯವಾಗಿರುವುದಿಲ್ಲ**

ತಮ್ಮ ಬೌದ್ಧಿಕ ಮನಸ್ಸನ್ನು ಪ್ರಮಾಣಬದ್ಧ(standard)ವನ್ನಾಗಿ ಮಾಡುವ ಹಾಗೂ ಆಧ್ಯಾತ್ಮಿಕ ಅನುಭವವನ್ನು ತೀರ್ಮಾನಕ್ಕೊಳಪಡಿಸುವ ಜನರಿಗೆ ನಾನು ಒಂದು ಸರಳ ಪ್ರಶ್ನೆ ಕೇಳುವೆ. ಭಗವಂತ ಮನಸ್ಸಿಗಿಂತ ಕೆಳಸ್ತರದಲ್ಲಿರುವನೇ ಇಲ್ಲವೆ ಉಚ್ಚಸ್ತರದಲ್ಲಿರುವನೇ? ಮನಸ್ಸಿನ ಪ್ರಜ್ಞೆ, ತಡಕಾಡುವ ವಿಚಾರಣೆ, ಕೊನೆಯಿಲ್ಲದೆ ವಾದ, ತಣಿಸಲಾಗದ ಸಂಶಯ, ಮೃದುವಲ್ಲದ, ನಮ್ಯವಲ್ಲದ ತರ್ಕ ಇವೆಲ್ಲವುಗಳೊಂದಿಗೆ ದೈವೀ ಪ್ರಜ್ಞೆಗಿಂತ ಉಚ್ಚವಾಗಿದೆಯೆ, ಇಲ್ಲವೆ ಅದಕ್ಕೆ ಸಮನಾಗಿದೆಯೆ ಇಲ್ಲವೆ ಅದರ ಕ್ರಿಯೆಯಲ್ಲಿ ಹಾಗೂ ಸ್ಥಾನಮಾನದಲ್ಲಿ ಕೆಳಸ್ತರದ ಏನೋ ಒಂದಾಗಿದೆಯೆ? ಅದು ಶ್ರೇಷ್ಠತರವಾಗಿದ್ದರೆ ಭಗವಂತನನ್ನು ಅರಸುವುದಕ್ಕೆ ಕಾರಣವಿರುವುದಿಲ್ಲ. ಸಮನಾಗಿದ್ದರೆ ಆಗ ಆಧ್ಯಾತ್ಮಿಕ ಅನುಭವ ಅನಗತ್ಯದ್ದಾ–ಗಿರುತ್ತದೆ. ಅದು ಕೆಳಸ್ತರದ್ದಾಗಿದ್ದರೆ ಆಗ ಅದು ಭಗವಂತನಿಗೆ ಹೇಗೆ ಸವಾಲೊಡ್ಡಬಹುದು, ಅವನನ್ನು ಹೇಗೆ ತೀರ್ಮಾನಕ್ಕೊಳಪಡಿಸಬಹುದು, ಅವನನ್ನು ಅಪರಾಧಿಯನ್ನಾಗಿ ಇಲ್ಲವೆ ಸಾಕ್ಷಿಯನ್ನಾಗಿ ನ್ಯಾಯಮಂಡಲಿಯ ಮುಂದೆ ಹೇಗೆ ನಿಲ್ಲಿಸಬಲ್ಲದು, ಪರೀಕ್ಷಾ ಮಂಡಳಿಯ ಎದುರು ಪ್ರವೇಶ ದೊರಕಿಸಲು ಬಯಸುವ ಅಭ್ಯರ್ಥಿಯ ಹಾಗೆ ಹಾಜರಾಗಲು ಅವನಿಗೆ ಹೇಗೆ ಆದೇಶ ನೀಡಲಾದೀತು? ಇಲ್ಲವೆ ಅವನನ್ನು ಹುಳುವನ್ನಾಗಿ ಮಾಡಿ ಗುಂಡುಸೂಜಿ (pin)ಯಿಂದ ಕಟ್ಟಿಹಾಕಿ ಸೂಕ್ಷ್ಮದರ್ಶಕ ಮೂಲಕ ಹೇಗೆ ನೋಡಲಾದೀತು? ಪ್ರಾಣಿಕ ಪಶು ತನ್ನ ಪ್ರಾಣಿಕ ಹುಟ್ಟುಗುಣಗಳು, ಜತೆಗಾರಿಕೆಗಳು ಮತ್ತು ಪ್ರಚೋದನೆಗಳು ಇವೆಲ್ಲವುಗಳ ಪ್ರಮಾಣಬದ್ಧತೆ ವಿಫಲವಾಗದೆ ಇರುವಂತಹದು ಎಂದು ಎತ್ತಿ ಹಿಡಿಯಬಲ್ಲದೆ, ಮತ್ತು ಮನುಷ್ಯನ ಮನಸ್ಸನ್ನು ತೀರ್ಮಾನಕ್ಕೊಳಪಡಿಸಬಹುದೆ, ವಿವರಣೆಗೆ ಒಳಪಡಿಸಬಹುದೆ, ಮತ್ತು ಅದರ ಆಳದಲ್ಲಿಳಿದು ಹೋಗಬಹುದೆ? ಅದನ್ನು ಕೈಕೊಳ್ಳಲಾರದು, ಏಕೆಂದರೆ ಮನುಷ್ಯನ ಮನಸ್ಸು ಶ್ರೇಷ್ಠತರ ಸಾಮರ್ಥ್ಯವಾಗಿದ್ದು ಹೆಚ್ಚು

ವಿಶಾಲವಾದ ಹಾಗೂ ಸಂಕೀರ್ಣವಾದ ರೀತಿಯಲ್ಲಿ ಕಾರ್ಯಕೈಕೊಳ್ಳುತ್ತದೆ, ಅದನ್ನು ಪ್ರಾಣಿಕ ಪ್ರಜ್ಞೆ ಅರಿತುಕೊಳ್ಳಲಾರದು. ಅದೇ ರೀತಿಯಲ್ಲಿ ದೈವೀ ಪ್ರಜ್ಞೆ ಮನುಷ್ಯನ ಪ್ರಜ್ಞೆಗಿಂತ ಅನಂತಪಟ್ಟು ವಿಶಾಲವಾದದ್ದು, ಹೆಚ್ಚು ಸಂಕೀರ್ಣವಾದದ್ದು ಎಂಬುದನ್ನು ನೋಡುವುದು ಅಷ್ಟೊಂದು ಕಷ್ಟಕರವಾಗಿದೆಯೆ? ಆ ದೈವೀ ಪ್ರಜ್ಞೆ ಶ್ರೇಷ್ಠತರ ಸಾಮರ್ಥ್ಯಗಳು, ಪ್ರಕಾಶಗಳು ಇವುಗಳಿಂದ ತುಂಬಿಕೊಂಡಿದೆ, ಅವುಗಳು ಚಲಿಸುವ ರೀತಿಯನ್ನು ಕೇವಲ ಮನಸ್ಸು ತೀರ್ಮಾನಕ್ಕೊಳಪಡಿಸಲು, ವಿವರಣೆ ನೀಡಲು ಆಳದಲ್ಲಿಳಿದು ಹೋಗಲು, ಅದರ ವಿಫಲವಾಗುವ ತರ್ಕ ಮತ್ತು ಸೀಮಿತ ಮಾನಸಿಕ ಅರ್ಥ–ಜ್ಞಾನ ಇವುಗಳ ಪ್ರಮಾಣಬದ್ಧತೆಯಿಂದ ಸಾಧ್ಯವಾಗದು. ಸರಳ ವಾಸ್ತವ ಸಂಗತಿ ಎಂದರೆ ಆತ್ಮ ಮತ್ತು ಮನಸ್ಸು ಇವು ಒಂದೇ ವಿಷಯವಲ್ಲ. ಮತ್ತು ಯೋಗಿ ಆಧ್ಯಾತ್ಮಿಕ ಪ್ರಜ್ಞೆಯಲ್ಲಿ ಪ್ರವೇಶಿಸಬೇಕು (ಇದೆಲ್ಲದರಲ್ಲಿ ನಾನು ಕನಿಷ್ಠಮಟ್ಟದಲ್ಲೂ ಅತಿಮನಸ್ಸನ್ನು ಕುರಿತು ಮಾತನಾಡುತ್ತಿಲ್ಲ), ಆಗ ಅವನು ಬಯಸುವ ಭಗವಂತನೊಡನಿರುವ ಸಂಪರ್ಕ ಇಲ್ಲವೆ ಏಕತೆ ಪಡೆಯಬಲ್ಲ. ಮನಸ್ಸು ತನ್ನ ಸೀಮಿತತೆಗಳನ್ನು ಗುರುತಿಸಲು ತನ್ನನ್ನು ಅಚಂಚಲಗೊಳಿಸಲು, ಒತ್ತಾಯದ ಬೇಡಿಕೆಗಳನ್ನು ಬಿಟ್ಟುಕೊಡಲು, ತನ್ನದೇ ಮಬ್ಬಾದ ಸ್ತರದಲ್ಲಿ ಕಂಡುಕೊಳ್ಳುವುದಕ್ಕಿಂತ ಶ್ರೇಷ್ಠತರ ದೈವೀ ಪ್ರಕಾಶಕ್ಕೆ ತೆರೆದುಕೊಳ್ಳಲು ಹಾಗೂ ಶರಣಾಗತವಾಗಲು ಒತ್ತಾಯ ತರುವುದು ಭಗವಂತನ ಹುಚ್ಚಾಟಿಕೆಯಲ್ಲ ಇಲ್ಲವೆ ಪೀಡನವಲ್ಲ.

**CWSA, 28/341–42** **– ಶ್ರೀ ಅರವಿಂದರು**

*

**ಸಂಶಯ ಹಾಗೂ ತಾರತಮ್ಯ ಇವುಗಳ ನಡುವಿರುವ ವ್ಯತ್ಯಾಸ ಗುರುತಿಸುವುದು**

ಹಾಗಿದ್ದರೂ ಒಂದು ವಿಷಯವಿದೆ – ನಾನು ಸಂಶಯ ಹಾಗೂ ತಾರತಮ್ಯ ಇವುಗಳ ನಡುವೆ ವ್ಯತ್ಯಾಸ ಗುರುತಿಸುತ್ತೇನೆ. ಈ ಅಥವಾ ಆ ವಿಷಯದ ಸತ್ಯ ಏನಿರಬಹುದು ಎಂದು ತಾರತಮ್ಯ ಗುರುತಿಸುವುದಕ್ಕೆ ಪ್ರಶ್ನಿಸುವುದು ತಾರತಮ್ಯದ ಒಂದು ಭಾಗವಾಗಿರುತ್ತದೆ ಮತ್ತು ಅದನ್ನು ಅಂಗೀಕರಿಸಬಹುದು. ಆದರೆ ಈಗ ಸಾಮಾನ್ಯವಾಗಿ ಸಂಶಯದ ಅರ್ಥ ಧನಾತ್ಮಕವಾಗಿ ಹಾಗೂ ಅಂತಿಮವಾಗಿ ಕೈಕೊಂಡ ನಿರಾಕರಣೆ, ಅದು ವಿಚಾರಣೆ ನಡೆಸಲು, ಪ್ರಕಾಶದಲ್ಲಿ ಆಲೋಚಿಸಲು, ಪ್ರಯತ್ನಿಸಲು, ತಪಾಸಣೆ ನಡೆಸಲು ನಿಂತುಕೊಳ್ಳುವುದಿಲ್ಲ, ಆದರೆ ಒಮ್ಮೆಗೆ "ಓ, ಇಲ್ಲ, ಅದು ಸತ್ಯವಾಗಿರುವ ಸಾಧ್ಯತೆಯನ್ನು ನಾನೆಂದಿಗೂ ಒಪ್ಪಿಕೊಳ್ಳಲಾರೆ,"

ಎಂದು ಹೇಳುತ್ತದೆ. ಆ ಬಗೆಯ ಸಂಶಯ ಸಾಮಾನ್ಯ ಜೀವನದಲ್ಲಿ ಬಹಳ ಉಪಯುಕ್ತವಾಗಿರುತ್ತದೆ, ಸ್ಥಾಪಿತಗೊಂಡ ವಿಷಯಗಳನ್ನು, ಸ್ಥಾಪಿತಗೊಂಡ ವಿಚಾರಗಳನ್ನು ಕಟುವಾಗಿ ಟೀಕಿಸಲು ವ್ಯವಹಾರೋಪಯುಕ್ತವಾಗಿರುತ್ತದೆ. ಇಲ್ಲವೆ ಕೆಲವೊಂದು ಬಗೆಯ ಬಾಹ್ಯ ವಾಗ್ವಾದದಲ್ಲಿ ದರ್ಪದಿಂದ ಧನಾತ್ಮಕವಾಗಿ ತೆಗೆದುಕೊಂಡ ನಿಲುವನ್ನು ಅಗೋಚರವಾಗಿ ಕೆಡಿಸಲು ಸಹಾಯಕವಾಗುತ್ತದೆ, ಆದರೆ ಬೌದ್ಧಿಕ ವಿಚಾರಣೆಯಂತಹ ವಿಷಯಗಳಲ್ಲೂ ಕೂಡ ಅದು ಧನಾತ್ಮಕವಾಗಿ ಉಪಯುಕ್ತವಾಗಬಹುದೆಂದು ನನಗನಿಸುವುದಿಲ್ಲ. ನಿಷ್ಪಕ್ಷಪಾತದ ತಾರತಮ್ಯ ಹೆಚ್ಚು ಒಳ್ಳೆಯ ರೀತಿಯಲ್ಲಿ ಕೈಕೊಳ್ಳಲಾಗದುದನ್ನು ಕೈಕೊಳ್ಳುವಂತೆ ಮಾಡಲು ಅದರಲ್ಲಿ ಏನೂ ಇರುವುದಿಲ್ಲ. ಆಧ್ಯಾತ್ಮಿಕ ವಿಷಯಗಳಲ್ಲಿ ತಾರತಮ್ಯಕ್ಕೆ ಭವ್ಯ ಸ್ಥಾನವಿದೆ, ಆದರೆ ನಿರಾಕರಿಸುವ ಸಂಶಯ ದೈವೀ ಸತ್ಯದತ್ತ ಇರುವ ಮಾರ್ಗಕ್ಕೆ ತಡೆ ಉಂಟು ಮಾಡುತ್ತದೆ, ಅದರ ಭಿತ್ತಿಪತ್ರ (placard) "ಪ್ರವೇಶವಿಲ್ಲ" ಇಲ್ಲವೆ ದರ್ಪದಿಂದ ಹೇಳುವ "ಇಷ್ಟು ದೂರ ಮತ್ತು ಮುಂದೆ ಸಾಗುವಂತಿಲ್ಲ" ಎಂದಿರುತ್ತದೆ.

**CWSA, 28/345** **– ಶ್ರೀ ಅರವಿಂದರು**

*

ಮಾರ್ಗದಲ್ಲಿ ಅಡ್ಡಬರಬಹುದಾದ ಅಡೆತಡೆಗಳಲ್ಲಿ ಕೇವಲ ಮೂರು ಮೂಲಭೂತವಾದವುಗಳಿವೆ:

1. ನಂಬಿಕೆ ಇಲ್ಲದೆ ಇರುವುದು ಇಲ್ಲವೆ ನಂಬಿಕೆ ಸಾಕಷ್ಟಾಗಿರದೆ ಇರುವುದು.
2. ಅಹಂಮನ್ಯತೆ – ಮನಸ್ಸು ತನ್ನದೇ ವಿಚಾರಗಳಿಗೆ ಅಂಟಿಕೊಂಡಿರುವುದು, ಪ್ರಾಣಿಕ ನಿಜವಾದ ಶರಣಾಗತಿಯನ್ನು ಮಾಡಿಕೊಳ್ಳುವುದರ ಬದಲಾಗಿ ತನ್ನದೇ ಆಸೆಗಳಿಗೆ ಆದ್ಯತೆ ನೀಡುವುದು, ಭೌತಿಕ ತನ್ನದೇ ಭೌತಿಕ ರೂಢಿಗಳಿಗೆ ಅಂಟಿಕೊಂಡಿರುವುದು.
3. ಪ್ರಜ್ಞೆಯಲ್ಲಿ ಸ್ವಲ್ಪಮಟ್ಟಿಗಿನ ಜಡತ್ವ ಇಲ್ಲವೆ ಮೂಲಭೂತ ವಿರೋಧ, ಬದಲಾಗಲು ಇಷ್ಟಪಡದೆ ಇರುವುದು, ಏಕೆಂದರೆ ಅದಕ್ಕೆ ಹೆಚ್ಚಿನ ಮಟ್ಟದ ಪ್ರಯತ್ನ ಬೇಕಾಗುತ್ತದೆ ಇಲ್ಲವೆ ಅದು ತನ್ನದೇ ಕ್ಷಮತೆಯಲ್ಲಾಗಲಿ ಇಲ್ಲವೆ ಭಗವಂತನ ಸಾಮರ್ಥ್ಯದಲ್ಲಾಗಲಿ ನೆಚ್ಚಿಕೆ ಇರಿಸುವುದನ್ನು ಬಯಸದೆ

ಇರುವುದು. – ಇಲ್ಲವೆ ಇನ್ನೂ ಬೇರೆ ಹೆಚ್ಚು ಅವಚೇತನದ್ದಾಗಿರುವ ಕಾರಣಕ್ಕಾಗಿ ಇರಬಹುದು.

**CWSA, 31/638** – ಶ್ರೀ ಅರವಿಂದರು

*



## ನಂಬಿಕೆ ಮತ್ತು ಯೋಗ

### ಕಲ್ಯಾಣ ಶ್ರದ್ಧಾ

ಪರಿಪೂರ್ಣತೆಗಾಗಿ ಸಮತೆಯುಳ್ಳ ಹೃದಯದ ಆವಶ್ಯಕತೆ ಇದೆ, ಆದರೆ ಕೇವಲ ನಿಷ್ಕ್ರಿಯ ಸಮತೆಯಷ್ಟೇ ಅಲ್ಲ; ಎಲ್ಲ ಅನುಭವಗಳ ಹಿಂದೆ ದೈವೀ ಸಾಮರ್ಥ್ಯವಿದೆ ಅದು ಜಗತ್ತಿನ ವಿಷಗಳನ್ನು ಅಮೃತವನ್ನಾಗಿ ಬದಲಿಸುವಂತೆ ಮಾಡುವ, ಪ್ರತಿಕೂಲ ಪರಿಸ್ಥಿತಿಯ ಹಿಂದೆ ಸಂತೋಷಕರ ಆಧ್ಯಾತ್ಮಿಕ ಉದ್ದೇಶವನ್ನು ನೋಡುವ, ವೇದನೆಯ ಹಿಂದೆ ಪ್ರೇಮದ ರಹಸ್ಯವನ್ನು ಕಂಡುಕೊಳ್ಳುವ, ನೋವಿನ ಬೀಜದಲ್ಲಿ ದೈವೀ ಬಲದ ಹಾಗೂ ಸಂತೋಷದ ಹೂವನ್ನು ನೋಡುವ ನಂಬಿಕೆ ಹಾಗೂ ಸಂಕಲ್ಪಗಳಿರುವ ಹಾಗೆ ಶಾಶ್ವತವಾಗಿ ಕೈಕೊಳ್ಳುತ್ತಿರುವುದರ ಭಾವನೆ ಇರಬೇಕು. ಈ ಕಲ್ಯಾಣ ಶ್ರದ್ಧಾ ಅವಶ್ಯವಿದೆ, ಅದರಿಂದಾಗಿ ಹೃದಯ ಹಾಗೂ ವ್ಯಕ್ತವಾದ (overt) ಚೈತ್ಯಸತ್ತೆ ರಹಸ್ಯ ದೈವೀ ಆನಂದಕ್ಕೆ ಪ್ರತಿಸ್ಪಂದಿಸುವಂತಾಗುವುದು, ಮತ್ತು ತಮ್ಮನ್ನು ಈ ಮೂಲ ಸಾರದಲ್ಲಿ ಬದಲು ಮಾಡಿಕೊಳ್ಳುವಂತಾಗುವುದು. ಈ ನಂಬಿಕೆ ಮತ್ತು ಸಂಕಲ್ಪ ಇವು ಪ್ರೇಮಕ್ಕಾಗಿ ಸೀಮಿತತೆಗೆ ಒಳಪಡಿಸಲಾಗದ, ಅತ್ಯಂತ ವಿಶಾಲವಾದ ಮತ್ತು

ಅತ್ಯಂತ ಗಾಢವಾದ ಕ್ಷಮತೆಯಿಂದ ಒಡಗೂಡಿರಬೇಕು ಮತ್ತು ಅದಕ್ಕೆ ತೆರೆದುಕೊಂಡಿರಬೇಕು. ಏಕೆಂದರೆ ಹೃದಯದ ಮುಖ್ಯ ವ್ಯವಹಾರ ಪ್ರೇಮದ ನಿಜವಾದ ಕಾರ್ಯವಿಧಾನವಾಗಿದೆ. ಅದು ಸಂಪೂರ್ಣ ಏಕತೆ ಮತ್ತು ಅನನ್ಯತೆಗಳಿಗಾಗಿ ವಿಧಿಸಲಾದ ನಮ್ಮ ಉಪಕರಣ; ಏಕೆಂದರೆ ಜಗತ್ತಿನಲ್ಲಿ ಅನನ್ಯತೆಯನ್ನು ತಿಳಿವಳಿಕೆಯ ಮೂಲಕ ನೋಡುವುದಷ್ಟೇ ಸಾಕಾಗದು, ಅದರ ಬಗ್ಗೆ ಭಾವನೆಯನ್ನು ಹೃದಯದ ಮೂಲಕ ಹಾಗೂ ಚೈತ್ಯದಲ್ಲಿ ತಂದುಕೊಂಡಿರಬೇಕು. ಮತ್ತು ಇದರರ್ಥ ಏಕೈಕನಾದವನಲ್ಲಿ, ಅವನಲ್ಲಿರುವ ಜಗತ್ತಿನ ಎಲ್ಲ ಅಸ್ತಿತ್ವಗಳಲ್ಲಿ ದಿವ್ಯಾನಂದ, ದೇವನ ಹಾಗೂ ಎಲ್ಲ ಸತ್ತೆಗಳ ಪ್ರೇಮ ಇರುವುದಾಗಿದೆ.

**CWSA, 24/737** – ಶ್ರೀ ಅರವಿಂದರು

*

**ಆಧ್ಯಾತ್ಮಿಕ ಜೀವನದ ನಿಯಮ**

ಆದರೆ ನಿನ್ನ ಹಾಗೂ ಭಗವಂತನ ನಡುವೆ ಯಾವುದಕ್ಕಾದರೂ ಅಡ್ಡಿಪಡಿಸುವುದಕ್ಕೆ ಅನುವು ಮಾಡಿಕೊಡುವುದೇಕೆ? ಅದು ಯಾವುದೇ ವಿಚಾರವಾಗಿರಲಿ, ಇಲ್ಲವೆ ಯಾವುದೇ ಘಟನೆಯಾಗಿರಲಿ; ನೀನು ಪೂರ್ತಿ ಅಭೀಪ್ಸೆಯೊಂದಿಗಿದ್ದಾಗ, ಸಂತೋಷದಿಂದಿದ್ದಾಗ ಯಾವುದೂ ಲೆಕ್ಕಕ್ಕೆ ಬಾರದಿರಲಿ, ಭಗವಂತ ಮತ್ತು ನಿನ್ನ ಅಭೀಪ್ಸೆ ಇವುಗಳ ಹೊರತಾಗಿ ಬೇರೆ ಯಾವುದೂ ಮಹತ್ವದ್ದಲ್ಲ. ಮನುಷ್ಯನಿಗೆ ಭಗವಂತ ಬೇಗ, ಪರಿಪೂರ್ಣವಾಗಿ, ಇಡಿಯಾಗಿ ಬೇಕಾಗಿದ್ದರೆ ಸಮೀಪಿಸುವ ಮನೋಭಾವ ಅದಾಗಿರಬೇಕು, ಆ ಮನೋಭಾವ ಪರಿಪೂರ್ಣವಾದದ್ದು, ಎಲ್ಲವನ್ನೂ ಮಗ್ನವಾಗಿಸುವಂತಹದು, ಅದರೊಂದಿಗೆ ಬೇರಾವುದೂ ಮಧ್ಯೆ ಪ್ರವೇಶಿಸದಂತೆ ಅದನ್ನು ಒಂದು ಗುರಿಯನ್ನಾಗಿ ಮಾಡುವುದು ಆಗಿರಬೇಕು.

ಭಗವಂತನನ್ನು ಕುರಿತು ಮಾನಸಿಕ ವಿಚಾರಗಳಿಗೆ ಯಾವ ಮೌಲ್ಯವಿದೆ, ಅವನೇನಾಗಿರಬೇಕು, ಅವನು ಹೇಗೆ ಕಾರ್ಯ ಕೈಕೊಳ್ಳಬೇಕು, ಅವನ ಕಾರ್ಯ ಮಾಡದಿರುವ ರೀತಿ ಹೇಗಿರಬೇಕು – ಇಂತಹ ವಿಚಾರಗಳು ಕೇವಲ ಅಡ್ಡಬರುತ್ತವೆ. ಕೇವಲ ಭಗವಂತನೇ ಸ್ವತಃ ಮಹತ್ವವುಳ್ಳವನಾಗಿರುತ್ತಾನೆ. ನಿಮ್ಮ ಪ್ರಜ್ಞೆ ಭಗವಂತನನ್ನು ಅಪ್ಪಿಕೊಂಡಾಗ ಭಗವಂತ ಏನಾಗಿದ್ದಾನೆ ಎಂಬುದನ್ನು

ನೀವು ತಿಳಿದುಕೊಳ್ಳಬಲ್ಲಿರಿ, ಅದಕ್ಕಿಂತ ಮೊದಲಲ್ಲ. ಶ್ರೀಕೃಷ್ಣ ಶ್ರೀಕೃಷ್ಣನೇ, ಅವನೇನು ಕೈಕೊಂಡ ಇಲ್ಲವೆ ಏನನ್ನು ಕೈಕೊಳ್ಳಲಿಲ್ಲ ಎಂಬುದರ ಬಗ್ಗೆ ಮನುಷ್ಯ ಚಿಂತೆ ಮಾಡುವುದಿಲ್ಲ, ಕೇವಲ ಅವನನ್ನು ನೋಡುವುದು, ಭೇಟಿ ಮಾಡುವುದು, ದೈವೀ ಪ್ರಕಾಶ, ದೈವೀ ಸಾನ್ನಿಧ್ಯ, ದೈವೀ ಪ್ರೇಮ, ಆನಂದ ಇವುಗಳ ಬಗ್ಗೆ ಭಾವನೆ ತಂದುಕೊಳ್ಳುವುದು ಇದೆಲ್ಲ ಮಹತ್ವದ್ದಾಗಿರುತ್ತದೆ. ಆಧ್ಯಾತ್ಮಿಕ ಅಭೀಪ್ಸೆಗಾಗಿ ಅದು ಯಾವಾಗಲೂ ಹೀಗಿದೆ – ಅದು ಆಧ್ಯಾತ್ಮಿಕ ಜೀವನದ ನಿಯಮ.

**CWSA, 29/56** **– ಶ್ರೀ ಅರವಿಂದರು**

*

ಭಗವಂತನಲ್ಲಿ, ದೈವೀ ಕೃಪೆಯಲ್ಲಿ ಸಾಧನೆಯ ಸತ್ಯದಲ್ಲಿ, ಆಧ್ಯಾತ್ಮಿಕ ಮಾರ್ಗದಲ್ಲಿ ಮತ್ತು ಗುರುವನ್ನು ಕುರಿತು ಆತ್ಮದ ಮಾನಸಿಕ, ಪ್ರಾಣಿಕ ಹಾಗೂ ಭೌತಿಕ ತೊಂದರೆಗಳ ಮೇಲೆ ಅದರ (ಆತ್ಮದ) ಅಂತಿಮವಾಗಿ ಬರುವ ವಿಜಯದಲ್ಲಿ ನಂಬಿಕೆಯನ್ನಿರಿಸು ಎಂದು ನಾನು ನಿನ್ನನ್ನು ಕೇಳುತ್ತೇನೆ. ಇವುಗಳನ್ನು ಹೊರತುಪಡಿಸಿದ ವಿಷಯಗಳ ಅಸ್ತಿತ್ವ ಕುರಿತು ಹೆಕೆಲ್ (Haeckel) ಇಲ್ಲವೆ ಹಕ್ಸಲೆ (Huxley) ಇಲ್ಲವೆ ಬರ್ಟ್ರಾಂಡ ರಸೆಲ್ (Bertrand Russel) ಇವರ ತತ್ವಜ್ಞಾನದಲ್ಲಿ ಬರೆದಿದ್ದಾರೆ, ಏಕೆಂದರೆ ಈ ವಿಷಯಗಳು ಸತ್ಯವಾಗಿರದಿದ್ದರೆ ಯೋಗದಲ್ಲಿ ಅರ್ಥವಿರುವುದಿಲ್ಲ.

*

**ಮನುಷ್ಯನಿಗೆ ಭಗವಂತ ಬೇಕಾಗಿದ್ದರೆ**

ಮನುಷ್ಯನಿಗೆ ಭಗವಂತ ಬೇಕಾಗಿದ್ದರೆ, ಭಗವಂತನೇ ಸ್ವತಃ ಅವನ ಹೃದಯವನ್ನು ಪರಿಶುದ್ಧಗೊಳಿಸುವ, ಸಾಧನೆಯನ್ನು ಅಭಿವೃದ್ಧಿಗೊಳಿಸುವ ಕಾರ್ಯವನ್ನು ಕೈಗೆತ್ತಿಕೊಳ್ಳುತ್ತಾನೆ ಮತ್ತು ಅವಶ್ಯವಾದ ಅನುಭವಗಳನ್ನು ಕೊಡುತ್ತಾನೆ. ನಾನು ಹೇಳುವುದರ ಅರ್ಥ ಮನುಷ್ಯನಲ್ಲಿ ನಂಬಿಕೆ, ಗಾಢ ವಿಶ್ವಾಸಗಳಿದ್ದರೆ ಮತ್ತು ಶರಣಾಗತಿ ಮಾಡಿಕೊಳ್ಳುವ ಸಂಕಲ್ಪವಿದ್ದರೆ, ಅದು ಆ ರೀತಿಯಲ್ಲಿ ಆಗುವುದು ಸಾಧ್ಯವಿದೆ ಮತ್ತು ಸಂಭವಿಸುತ್ತದೆ. ಏಕೆಂದರೆ ಇಂತಹದನ್ನು ಕೈಗೆತ್ತಿಕೊಳ್ಳುವಿಕೆ ಮನುಷ್ಯ ತನ್ನದೇ ಪ್ರಯತ್ನಗಳ ಮೇಲೆ ವಿಶ್ವಾಸವಿರಿಸುವುದಕ್ಕಿಂತ ಹೆಚ್ಚಾಗಿ ತನ್ನನ್ನು ಭಗವಂತನ ಕೈಗಳಲ್ಲಿ ಇರಿಸುವುದನ್ನು ಒಳಗೊಳ್ಳುತ್ತದೆ ಮತ್ತು ಮನುಷ್ಯ ತನ್ನ ವಿಶ್ವಾಸವನ್ನು ಗಾಢ ನಂಬಿಕೆಯನ್ನು

ಭಗವಂತನಲ್ಲಿ ಇರಿಸುವುದನ್ನು ಮತ್ತು ಪ್ರಗತಿಪರ ಸ್ವ–ಸಮರ್ಪಣೆಯನ್ನು ಸೂಚಿಸುತ್ತದೆ. ವಾಸ್ತವದಲ್ಲಿ ನಾನು ಅನುಸರಿಸಿದ ಸಾಧನೆಯ ತತ್ವ ಅದಾಗಿದೆ ಮತ್ತು ನಾನು ಆಲೋಚಿಸುವ ಹಾಗೆ ಅದು ಯೋಗದ ಪ್ರಧಾನ ಭಾಗವಾಗಿದೆ. ಶ್ರೀ ರಾಮಕೃಷ್ಣರು ಬೆಕ್ಕಿನ ಮರಿಯ ವಿಧಾನ ಎಂದು ತಮ್ಮ ಪ್ರತೀಕದಲ್ಲಿ ಅರ್ಥಮಾಡಿಕೊಂಡದ್ದು ಇದೇ ಆಗಿದೆ ಎಂದು ನನಗನಿಸುತ್ತದೆ. ಆದರೆ ಎಲ್ಲರೂ ಅದನ್ನು ಒಮ್ಮೆಗೆ ಅನುಸರಿಸಲಾರರು; ಅದರತ್ತ ತಲುಪಲು ಅವರಿಗೆ ಕಾಲ ಬೇಕಾಗುತ್ತದೆ – ಮನಸ್ಸು ಮತ್ತು ಪ್ರಾಣಿಕ ಅಚಂಚಲವಾದಾಗ ಅದು ಹೆಚ್ಚಿನ ರೀತಿಯಲ್ಲಿ ಬೆಳೆಯುತ್ತದೆ.

**CWSA, 29/100, 70** – **ಶ್ರೀ ಅರವಿಂದರು**

*

**ಕುರುಡು ಯೋಚನೆಗಳಿಂದ ದೂರ ಹೊರಳಿರಿ ಮತ್ತು ಕೇವಲ ಶ್ರೀಮಾತೆಯವರತ್ತ ನೋಡಿರಿ**

ಯಾವ ಸಾಧಕನೂ ಎಂದಿಗೂ ನಿರಾಶೆಯ ಸ್ಥಿತಿ ಮತ್ತು ಅನರ್ಹತೆ ಇವುಗಳಿರುವ ಯೋಚನೆಗಳಲ್ಲಿ ಲೋಲನಾಗಬಾರದು – ಅವು ಬಹಳ ಅಪ್ರಸ್ತುತ–ವಾಗಿರುತ್ತವೆ, ಏಕೆಂದರೆ ಮನುಷ್ಯ ಯಶಸ್ವಿಯಾಗಬೇಕಾದರೆ ಅವನದೇ ಅರ್ಹತೆ ಮತ್ತು ಗೌರವಾರ್ಹ ಸ್ಥಿತಿ ಕಾರಣವಾಗಿರುವುದಿಲ್ಲ, ಆದರೆ ಶ್ರೀಮಾತೆಯವರ ದೈವೀ ಕೃಪೆ ಮತ್ತು ಸಾಮರ್ಥ್ಯ ಮತ್ತು ಅವರ ದೈವೀ ಕೃಪೆಯ ಹಾಗೂ ಅವರ ದೈವೀ ಶಕ್ತಿಯ ಕಾರ್ಯಗತಿಗಳಿಗೆ ಒಪ್ಪಿಗೆ ನೀಡುವಿಕೆ ಅವಶ್ಯವಾಗಿರುತ್ತವೆ.

ಈ ಕುರುಡು ಯೋಚನೆಗಳಿಂದ ಬೇರೆಡೆ ಹೊರಳಿರಿ ಮತ್ತು ಕೇವಲ ಶ್ರೀಮಾತೆಯವರತ್ತ ನೋಡಿರಿ, ಪರಿಣಾಮ ಹಾಗೂ ಅಸೆಯ ತೃಪ್ತಿಗಾಗಿ ತಾಳ್ಮೆ ಕಳೆದುಕೊಂಡಲ್ಲ, ಆದರೆ ವಿಶ್ವಾಸ ಹಾಗೂ ಗಾಢ ನಂಬಿಕೆಗಳಿಂದ ನೋಡಿರಿ. ಅವರ ಕಾರ್ಯಗತಿಗಳು ನಿಮಗೆ ಅಚಂಚಲತೆಯನ್ನು, ಚೈತ್ಯಾತ್ಮಿಕ ತೆರೆದಿರಿಸಿ–ಕೊಳ್ಳುವಿಕೆಯತ್ತ ಹಾಗೂ ಸಿದ್ಧಿಪಡೆಯುವತ್ತ ಪ್ರಗತಿಯ ಹೊಸ ರೂಪವನ್ನು ತರುವಂತಾಗಲಿ. ಅದು ನಿಶ್ಚಿತವಾಗಿ, ಸಂಶಯವಿಲ್ಲದೆ ನೀವು ಅರಸುತ್ತಿರುವ ಹೆಚ್ಚು ಪೂರ್ತಿಯಾದ ನಂಬಿಕೆ ಮತ್ತು ಪ್ರೇಮವನ್ನು ತರುತ್ತದೆ.

**CWSA, 29/34–35** – **ಶ್ರೀ ಅರವಿಂದರು**

*

## ಈ ನಂಬಿಕೆಯನ್ನೇ ನೀನು ಅಭಿವೃದ್ಧಿಪಡಿಸಬೇಕಾದ ಆವಶ್ಯಕತೆ ಇದೆ

ನೀನು ಈ ನಂಬಿಕೆಯನ್ನೇ ಅಭಿವೃದ್ಧಿಪಡಿಸಬೇಕಾದ ಆವಶ್ಯಕತೆ ಇದೆ – ಈ ನಂಬಿಕೆಯು ತರ್ಕ ಮತ್ತು ಸಾಮಾನ್ಯ ಜ್ಞಾನ ಇವುಗಳಿಗನುಸಾರವಾಗಿಯೇ ಇದೆ – ಭಗವಂತ ಅಸ್ತಿತ್ವದಲ್ಲಿದ್ದರೆ ಮತ್ತು ಆಧ್ಯಾತ್ಮಿಕ ಮಾರ್ಗದಲ್ಲಿ ಬರಲು ನಿನಗೆ ಕರೆ ಕೊಟ್ಟಿದ್ದರೆ, ಅದು ಸ್ಪಷ್ಟವಾಗಿದೆ, ಆಗ ಬೆಂಬಲವಾಗಿ ಭಗವಂತನ ಮಾರ್ಗದರ್ಶನ–ವಿರಲೇಬೇಕು ಮತ್ತು ಎಲ್ಲ ತೊಂದರೆಗಳಿದ್ದಾಗ್ಯೂ ಅವುಗಳಾದ್ಯಂತ ಸಾಗಿ ಹೋಗಿ ಗುರಿ ತಲುಪುವಿ. ವಿಫಲತೆಯನ್ನು ಸೂಚಿಸುವ ವಿರೋಧೀ ಶಕ್ತಿಗಳಿಗಾಗಲಿ ಇಲ್ಲವೆ ತಾಳ್ಮೆರಹಿತ ಅವಸರಿಸುವ ಧ್ವನಿಗಳ ಪ್ರತಿಧ್ವನಿಗಳಿಗಾಗಲಿ ಕಿವಿಗೊಡದೆ ಇರುವುದು, ದೊಡ್ಡ ತೊಂದರೆಗಳಿವೆ ಎಂಬ ಕಾರಣದಿಂದಾಗಿ ಯಶಸ್ಸು ಸಾಧ್ಯವಿಲ್ಲ ಎಂದು, ಇಲ್ಲವೆ ಭಗವಂತ ತನ್ನನ್ನು ಇನ್ನೂ ತೋರಿಸಿಕೊಟ್ಟಿಲ್ಲವಾದ್ದರಿಂದ, ಅವನೆಂದಿಗೂ ತನ್ನನ್ನು ತೋರಿಸಿಕೊಡುವುದಿಲ್ಲ ಎಂದು ನಂಬದೆ ಇರುವುದು, ಆದರೆ ಇದೆಲ್ಲದರ ಬದಲಾಗಿ ಮನುಷ್ಯ ತನ್ನ ಮನಸ್ಸನ್ನು ಒಂದು ಶ್ರೇಷ್ಠ ಮತ್ತು ಕಠಿಣ ಗುರಿಯ ಮೇಲೆ ಸ್ಥಿರಗೊಳಿಸಿದಾಗ ಅವನು ಹೊಂದಿರುವ ನಿಲುವನ್ನು ತೆಗೆದುಕೊಳ್ಳುವುದು: "ಯಶಸ್ಸು ದೊರಕುವವರೆಗೆ ಮುಂದೆ ಸಾಗಿ ಹೋಗುವೆ ಮತ್ತು ನಾನು ಯಶಸ್ವಿಯಾಗುವೆ – ತೊಂದರೆಗಳೇನೇ ಇರಲಿ." ಅದಕ್ಕೆ ಭಗವಂತನಲ್ಲಿ ನಂಬಿಕೆ ಇದ್ದವನು ಅಧಿಕವಾಗಿ ಸೇರಿಸಬಹುದಾದುದು ಹೀಗಿದೆ: "ಭಗವಂತ ಅಸ್ತಿತ್ವ–ದಲ್ಲಿದ್ದಾನೆ, ಅವನು ಅಲ್ಲಿದ್ದಾನೆ, ಅವನು ಅಸ್ತಿತ್ವದಲ್ಲಿರುವುದರಿಂದ ಭಗವಂತನನ್ನು ಅನುಸರಿಸಿ ಹೋಗುವಿಕೆ ವಿಫಲವಾಗದು. ಅವನನ್ನು ಕಂಡುಕೊಳ್ಳುವವರೆಗೆ ನಾನು ಪ್ರತಿಯೊಂದರಾದ್ಯಂತ ಸಾಗಿ ಹೋಗುವೆ."

**CWSA, 29/94** – ಶ್ರೀ ಅರವಿಂದರು

*

## ವಿಶ್ವಾಸ ಹಾಗೂ ಗಾಢ ನಂಬಿಕೆ ಆಂತರಿಕ ಶರಣಾಗತಿಯ ತಿರುಳಾಗಿದೆ

ಈ ಆಂತರಿಕ ಶರಣಾಗತಿಯ ತಿರುಳು ಭಗವಂತನಲ್ಲಿ ವಿಶ್ವಾಸ ಮತ್ತು ಗಾಢ ನಂಬಿಕೆ ಹೊಂದಿರುವುದಾಗಿದೆ. ಮನುಷ್ಯ "ನನಗೆ ಭಗವಂತ ಬೇಕು, ಬೇರೇನೂ ಬೇಡ" ಎಂಬ ಮನೋಭಾವ ತಳೆಯುತ್ತಾನೆ. ಅದನ್ನು ಬಿಟ್ಟುಕೊಡು ಎಂದು ನಿನ್ನನ್ನು ಕೇಳಲಾಗುವುದೆಂದು ನೀನು ಏಕೆ ಯೋಚಿಸಬೇಕು ಎಂಬುದು ನನಗೆ ತಿಳಿಯುತ್ತಿಲ್ಲ – ಅಲ್ಲಿ ಅದಿರದಿದ್ದರೆ ಆಗ ಯೋಗವನ್ನು ಕೈಕೊಳ್ಳಲಾಗುವುದಿಲ್ಲ.

“ನಾನು ನನ್ನನ್ನು ಇಡಿಯಾಗಿ ಅವನಿಗೆ ಕೊಟ್ಟುಕೊಳ್ಳಲು ಬಯಸುತ್ತೇನೆ ಮತ್ತು ನನ್ನ ಆತ್ಮ ಅದನ್ನು ಬಯಸುವುದರಿಂದಾಗಿ ಅದಲ್ಲದೇ ಬೇರೇನೂ ಆಗದು, ಆದರೆ ಅವನನ್ನು ಭೇಟಿ ಮಾಡುತ್ತೇನೆ, ಸಿದ್ಧಿಸಿಕೊಳ್ಳುತ್ತೇನೆ. ಅದನ್ನಲ್ಲದೆ ಬೇರೇನನ್ನೂ ನಾನು ಕೇಳುವುದಿಲ್ಲ, ನನ್ನನ್ನು ಅವನ ಬಳಿ ತರಲು ಅವನು ನನ್ನಲ್ಲಿ ಕೈಕೊಳ್ಳುವ ಕ್ರಿಯೆ, ಆ ಕ್ರಿಯೆ ರಹಸ್ಯವಾಗಿರಲಿ ಇಲ್ಲವೆ ಬಹಿರಂಗವಾಗಿರಲಿ, ಪರದೆಯ ಹಿಂದಿರಲಿ ಇಲ್ಲವೆ ಪ್ರಕಟವಾಗಿರಲಿ, ನನ್ನದೇ ಕಾಲ ಮತ್ತು ರೀತಿಗಳ ಮೇಲೆ ನಾನು ಒತ್ತುಕೊಡುವುದಿಲ್ಲ, ಅವನೇ ಎಲ್ಲವನ್ನೂ ಅವನದೇ ಸಮಯದಲ್ಲಿ, ಅವನದೇ ರೀತಿಯಿಂದ ಕೈಕೊಳ್ಳಲಿ, ಅವನನ್ನು ನಂಬುತ್ತೇನೆ, ಅವನ ಸಂಕಲ್ಪವನ್ನು ಒಪ್ಪಿಕೊಳ್ಳುತ್ತೇನೆ, ಅವನ ಪ್ರಕಾಶಕ್ಕಾಗಿ, ಸಾನ್ನಿಧ್ಯಕ್ಕಾಗಿ, ಸಂತೋಷಕ್ಕಾಗಿ ಏಕಪ್ರಕಾರವಾಗಿ ಅಭೀಪ್ಸೆ ಪಡುತ್ತೇನೆ, ಯಾವಾಗಲೂ ಅವನ ಮೇಲೆ ಭರವಸೆಯನ್ನಿರಿಸುತ್ತ ಎಲ್ಲ ತೊಂದರೆಗಳು ಮತ್ತು ನಿಧಾನ–ಗೊಳಿಸುವಿಕೆಗಳು ಇವುಗಳ ಮೂಲಕ ಸಾಗಿ ಹೋಗುತ್ತೇನೆ, ಎಂದಿಗೂ ಕೈಬಿಡುವುದಿಲ್ಲ. ನನ್ನ ಮನಸ್ಸು ಅಚಂಚಲವಾಗಿರಲಿ, ಮತ್ತು ಅವನತ್ತ ಹೊರಳಲಿ ಮತ್ತು ಅವನು ಅದನ್ನು ತನ್ನ ಪ್ರಕಾಶಕ್ಕೆ ತೆರೆದಿರಿಸಲಿ, ನನ್ನ ಪ್ರಾಣಿಕ ಅಚಂಚಲವಾಗಿರಲಿ ಮತ್ತು ಕೇವಲ ಅವನತ್ತ ಹೊರಳಲಿ, ಅವನು ಅದನ್ನು ತನ್ನ ಸ್ಥಿರತೆ ಮತ್ತು ಸಂತೋಷಗಳಿಗೆ ತೆರೆದಿರಿಸಲಿ. ಎಲ್ಲವೂ ಅವನಿಗಾಗಿ ಮತ್ತು ನಾನು ಕೂಡ ಅವನಿಗಾಗಿ. ಏನೇ ಸಂಭವಿಸಲಿ, ನಾನು ಈ ಅಭೀಪ್ಸೆಯನ್ನು ಮತ್ತು ಸ್ವ–ಅರ್ಪಣೆಯನ್ನು ಕಾಪಾಡಿಕೊಂಡು ಬರುತ್ತೇನೆ ಮತ್ತು ಅದನ್ನು ಕೈಕೊಳ್ಳಲಾಗುವುದೆಂಬ ಪರಿಪೂರ್ಣ ಭರವಸೆಯಲ್ಲಿ ಸಾಗಿ ಹೋಗುತ್ತೇನೆ.” ಆ ಮನೋಭಾವದಲ್ಲಿ ಮನುಷ್ಯ ಬೆಳೆಯಬೇಕು, ಏಕೆಂದರೆ, ನಿಶ್ಚಿತವಾಗಿ, ಅದನ್ನು ಪರಿಪೂರ್ಣವಾದದ್ದನ್ನಾಗಿ ಮಾಡಲಾಗುವುದಿಲ್ಲ, ಮಾನಸಿಕ ಹಾಗೂ ಪ್ರಾಣಿಕ ಚಲನೆಗಳು ಅಡ್ಡ ಬರುತ್ತವೆ, ಆದರೆ ಮನುಷ್ಯ ಅದಕ್ಕಾಗಿ ಸಂಕಲ್ಪವನ್ನಿರಿಸಿ–ಕೊಂಡರೆ, ಅದು ಸತ್ತೆಯಲ್ಲಿ ಬೆಳೆಯುತ್ತದೆ. ಉಳಿದದ್ದು ಮಾರ್ಗದರ್ಶನ ಪ್ರಕಟವಾದಾಗ ಅದಕ್ಕೆ ವಿಧೇಯತೆಯನ್ನಿರಿಸಿಕೊಂಡಿರುವ ವಿಷಯ – ಮನುಷ್ಯ ತನ್ನ ಮಾನಸಿಕ ಹಾಗೂ ಪ್ರಾಣಿಕ ಚಲನೆಗಳು ಮಧ್ಯೆ ಬರುವುದಕ್ಕೆ ಅನುವು ಮಾಡಿಕೊಡದೆ ಇರುವುದಾಗಿದೆ.

**CWSA, 29/70–71** – ಶ್ರೀ ಅರವಿಂದರು

*

## ಯೋಗದಲ್ಲಿ ಅವಶ್ಯವಾದ ಮೂಲಭೂತ ನಂಬಿಕೆ

ಯೋಗದಲ್ಲಿರಬೇಕಾದ ಮೂಲಭೂತ ನಂಬಿಕೆ ಇದು: ಅಂತರ್ನಿಹಿತವಾಗಿ ಆತ್ಮದಲ್ಲಿರುವಂತಹದು – ಭಗವಂತ ಅಸ್ತಿತ್ವದಲ್ಲಿದ್ದಾನೆ ಮತ್ತು ಬೆಂಬತ್ತಿ ಹೋಗಬೇಕಾದ ವಿಷಯ ಭಗವಂತ ಮಾತ್ರ. – ಅದಕ್ಕೆ ಹೋಲಿಸಿದರೆ ಜೀವನದಲ್ಲಿ ಹೊಂದಲು ಬೇರೆ ಯಾವುದೂ ಯೋಗ್ಯವಾಗಿಲ್ಲ. ನಿನ್ನಲ್ಲಿ ಬೆಳೆಯುತ್ತಿದ್ದ ಈ ನಂಬಿಕೆಯೇ ನೀನು ಯೋಗದತ್ತ ಬರುವಂತೆ ಮಾಡಿತು. ಮತ್ತು ಈ ನಂಬಿಕೆ ಮೃತವಾಗಿಲ್ಲ ಇಲ್ಲವೆ ಕುಗ್ಗಿ ಹೋಗಿಲ್ಲ. – ನಿನ್ನ ಪತ್ರಗಳಲ್ಲಿ ನೀನು ಹೇಳಿದುದನ್ನು ಕುರಿತು ತೀರ್ಮಾನಕ್ಕೆ ಬರಬಹುದಾದುದು ಎಂದರೆ ಅದು (ನಂಬಿಕೆ) ಪಟ್ಟುಹಿಡಿಯುವಂತಹದು ಮತ್ತು ನೆಲೆಸುತ್ತಿರುವಂತಹದು ಎಂದು ಹೇಳಬಹುದು. ಮನುಷ್ಯನಲ್ಲಿ ಅದು ಇರುವವರೆಗೆ ಅವನನ್ನು ಆಧ್ಯಾತ್ಮಿಕ ಜೀವನಕ್ಕಾಗಿ ಗುರುತಿಸಲಾಗಿರುತ್ತದೆ ಮತ್ತು ನಾನು ಹೇಳುವುದೇನೆಂದರೆ ಅವನ ಸ್ವಭಾವ ಅಡೆತಡೆಗಳಿಂದ ತುಂಬಿಕೊಂಡಿದ್ದಾಗ್ಯೂ, ನಿರಾಕರಣೆಗಳು ಹಾಗೂ ತೊಂದರೆಗಳು ಒತ್ತಿ ಹಿಡಿಯುವಂತಾಗಿದ್ದರೂ, ಅವನು ಬಹಳ ವರ್ಷಗಳ ಕಾಲ ಹೋರಾಡಬೇಕಾದರೂ ಆಧ್ಯಾತ್ಮಿಕ ಜೀವನಲ್ಲಿ ಯಶಸ್ಸು ಪಡೆಯುವುದಕ್ಕಾಗಿ ಅವನನ್ನು ಲಕ್ಷ್ಯದಲ್ಲಿಟ್ಟುಕೊಳ್ಳಲಾಗಿರುತ್ತದೆ.

ಭಗವಂತನ ಮಾರ್ಗದರ್ಶನದಲ್ಲಿ, ನಿನಗೆ ಪ್ರಕಟವಾಗಿ ತೋರಿಬರಲು ಇರುವ ಅವನ ಸಂಕಲ್ಪದಲ್ಲಿ ಇಲ್ಲವೆ ಅವನನ್ನು ಸ್ವೀಕರಿಸಲು ನಿನ್ನಲ್ಲಿರುವ ಕ್ಷಮತೆಯಲ್ಲಿ ನೀನು ಸ್ಥಿರವಾದ ನಂಬಿಕೆಯನ್ನು ಇನ್ನೂ ಹೊಂದಿಲ್ಲ. ಈ ಕಾರಣದಿಂದಾಗಿಯೇ ನೀನು ಆಂತರಿಕ ಅನುಭವದ ಹೊಸ್ತಿಲಲ್ಲಿದ್ದಾಗ, ವಿರೋಧೀ ಆಕ್ರಮಣಗಳು ಪ್ರಾರಂಭಗೊಂಡವು ಮತ್ತು ನಿನ್ನ ಮಿದುಳಿನಲ್ಲಿ ಸತತ ಸ್ಥಿರಗೊಳ್ಳಲು ಪ್ರಯತ್ನಿಸುತ್ತವೆ – ಯೋಗದಲ್ಲಿ ಇಂತಹದು ಬಹಳ ಸಲ ಸಂಭವಿಸುತ್ತದೆ. ಅವು ಅಲ್ಲಿ ಸ್ಥಿರಗೊಂಡ ಮಾನಸಿಕ ರೂಪತಾಳುವಿಕೆ ಇರುವುದನ್ನು ಬಯಸುತ್ತವೆ. ಅದರಿಂದಾಗಿ ನೀನು ಪ್ರಯತ್ನ ಮಾಡಿದಾಗೆಲ್ಲ ಭೌತಿಕ ಮನಸ್ಸಿನಲ್ಲಿ ತೊಂದರೆ ಬರುವ ನಿರೀಕ್ಷೆಯಿರುತ್ತದೆ, ತೊಂದರೆಯ, ಅಪಯಶಸ್ಸಿನ ಮತ್ತು ಅಸಮರ್ಥತೆಯ ವಿಚಾರಗಳ ಮೇಲೆ ನೆಲೆಸುವಿಕೆಯಿರುತ್ತದೆ, ಅದು ಯಾವಾಗಲೂ ಮನಸ್ಸಿನ ಮುಂದೆ ಇರದೆ ಇದ್ದಾಗ್ಯೂ ಮನಸ್ಸಿನ ಹಿಂದೆ ಇರುತ್ತದೆ, ಅದರ ಮೂಲಕ ಅವು ಅನುಭವ

ಬರುವುದನ್ನು ತಡೆಯಬಲ್ಲೆವೆಂದು ಭರವಸೆಯಿಂದಿರುತ್ತವೆ. ಈ ಮಾನಸಿಕ ರೂಪತಾಳುವಿಕೆಗಳನ್ನೇ ನೀನು ತಿರಸ್ಕರಿಸಬೇಕು, ಏಕೆಂದರೆ ಅವು ಪ್ರಾಣಿಕ ವಿಫಲತೆಗಳಿಗಿಂತ ಬಹಳ ದೊಡ್ಡ ಅಡೆತಡೆಯಾಗಿರುತ್ತವೆ, ನೀನು ಅವುಗಳಿಗೆ ಇಷ್ಟೊಂದು ಉತ್ಪ್ರೇಕ್ಷಿತ ಮಹತ್ವವನ್ನು ಕೊಡುತ್ತಿರುವಿ.

**CWSA, 29/93–94** **– ಶ್ರೀ ಅರವಿಂದರು**

*

**ಆತ್ಮದ ಪ್ರಕಾಶ ಕುರಿತು ನಂಬಿಕೆಯ ಸ್ಥಿತಿ ಮತ್ತು ದೈವೀ ಕರೆ**

ಆತ್ಮದ ಪ್ರಕಾಶಕ್ಕೆ ನಂಬಿಗಸ್ಥನಾಗಿರುವುದನ್ನು ಹಾಗೂ ದೈವೀ ಕರೆಯನ್ನು ಕುರಿತು ನಾನು ಹೇಳಿದಾಗ, ಗತಕಾಲದಲ್ಲಿ ಆದುದನ್ನು ಕುರಿತು ಇಲ್ಲವೆ ನಿನ್ನ ವತಿಯಿಂದಾದ ಅಚಾತುರ್ಯ ಕುರಿತು ನಾನು ಏನನ್ನೂ ಉಲ್ಲೇಖಿಸಿರಲಿಲ್ಲ. ಎಲ್ಲ ಸಂಕಟ ಕಾಲಗಳಲ್ಲಿ ಹಾಗೂ ಆಕ್ರಮಣಗಳಿದ್ದಾಗ ಅವಶ್ಯವಾದದ್ದನ್ನು ಕುರಿತು ದೃಢೀಕರಿಸುತ್ತಿದ್ದೆ. – ಯಾವುದೇ ಸೂಚನೆಗಳಿಗೆ, ಪ್ರಚೋದನೆಗಳಿಗೆ, ಅಮಿಷಕ್ಕೆ ಕಿವಿಗೊಡುವುದನ್ನು ತಿರಸ್ಕರಿಸುವುದು, ಅವೆಲ್ಲವನ್ನೂ ವಿರೋಧಿಸುವುದಕ್ಕೆ ದೈವೀ ಸತ್ಯಕ್ಕೆ ಕರೆ ಕೊಡುವುದು, ದೈವೀ ಪ್ರಕಾಶಕ್ಕೆ ಆಜ್ಞಾರ್ಥಕ ಮೂಕ ಸನ್ನೆ ಮಾಡುವುದು. ಸಂಶಯ ಮತ್ತು ಖಿನ್ನತೆ ಇವುಗಳಿದ್ದಾಗ: “ನಾನು ಭಗವಂತನಿಗೆ ಸೇರಿದವನಾಗಿದ್ದೇನೆ, ವಿಫಲತೆ ಉಂಟಾಗದು”; ಅಶುದ್ಧತೆಯ ಹಾಗೂ ಖಿನ್ನತೆಯ ಸೂಚನೆಗಳಿದ್ದಾಗ “ನಾನು ಅಮರತ್ವದ ಒಂದು ಮಗು, ನನ್ನನ್ನು ಭಗವಂತ ಆಯ್ದುಕೊಂಡಿದ್ದಾನೆ” ಎಂದು ಉತ್ತರ ನೀಡಬೇಕು. “ನಾನು ಕೇವಲ ನನಗೆ ಹಾಗೂ ಭಗವಂತನಿಗೆ ಸತ್ಯವಂತನಾಗಿರಬೇಕು – ವಿಜಯ ನಿಶ್ಚಿತ, ನಾನು ಪತನಗೊಂಡರೂ ಮತ್ತೆ ಮೇಲೆದ್ದು ಬರುವುದು ನಿಶ್ಚಿತ.” ನಿಮ್ನತರ ಆದರ್ಶಕ್ಕೆ ಸೇವೆ ಸಲ್ಲಿಸಲು ಹೊರಳಿ ಹೋಗುವಂತೆ ಮಾಡುವ ಎಲ್ಲ ಪ್ರಚೋದನೆಗಳಿಗೆ: “ಇದು ಅತ್ಯಂತ ಶ್ರೇಷ್ಠವಾದದ್ದು, ಇದು ದೈವೀ ಸತ್ಯ, ಅದು ಮಾತ್ರ ನನ್ನೊಳಗಿರುವ ಆತ್ಮಕ್ಕೆ ತೃಪ್ತಿ ನೀಡಬಲ್ಲದು, ನಾನು ಎಲ್ಲ ಕಷ್ಟ ಕ್ಲೇಶಗಳನ್ನು ಸತ್ವ ಪರೀಕ್ಷೆಗಳಾದ್ಯಂತ ದೈವೀ ಪ್ರಯಾಣದ ಕೊನೆಯವರೆಗೆ ತಾಳಿಕೊಳ್ಳುವೆ,” ಎಂದು ಉತ್ತರ ನೀಡಬೇಕು. ದೈವೀ ಪ್ರಕಾಶಕ್ಕೆ ಮತ್ತು ದೈವೀ ಕರೆಗೆ ಪ್ರಾಮಾಣಿಕತೆ–ಯಿಂದಿರುವುದು ಎಂಬ ಅರ್ಥದಲ್ಲಿ ನಾನು ಹೇಳಿದ್ದು ಇದೇ ಆಗಿದೆ.

**CWSA, 29/99** **– ಶ್ರೀ ಅರವಿಂದರು**

*

**ನಂಬಿಕೆ ದೊರಕಿಸುವುದಕ್ಕೆ ಮಾರ್ಗ**

ನಂಬಿಕೆಯನ್ನು ಮತ್ತು ಅಂತಹ ಇತರ ವಿಷಯಗಳನ್ನು ದೊರಕಿಸಲು ಇರುವ ಮಾರ್ಗವೆಂದರೆ ಅವುಗಳನ್ನು ದೊರಕಿಸುವುದರ ಮೇಲೆ ಒತ್ತು ಕೊಡಬೇಕು ಮತ್ತು ಅವುಗಳನ್ನು ಕುರಿತು ಕುಗ್ಗಿಕೊಳ್ಳವಿಕೆ, ನಿರಾಶೆ ಇಲ್ಲವೆ, ಅವುಗಳನ್ನು ದೊರಕಿಸುವ ಮೊದಲೇ ಕೈ ಬಿಟ್ಟುಬಿಡುವುದನ್ನು ತಿರಸ್ಕರಿಸಬೇಕು. ಈ ಕಠಿಣ ಜಗತ್ತು ಯೋಚಿಸುವ ಮತ್ತು ಅಭೀಪ್ಸೆಪಡುವ ಜೀವಿಗಳನ್ನು ಹೊಂದಲು ಪ್ರಾರಂಭಿಸಿದಂದಿನಿಂದ ಪ್ರತಿಯೊಂದನ್ನು ಆ ರೀತಿಯನ್ನು ಅನುಸರಿಸಿ ದೊರಕಿಸಿದೆ. ಅದು, ಯಾವಾಗಲೂ, ದೈವೀ ಪ್ರಕಾಶದತ್ತ ತೆರೆದಿರಿಸಿಕೊಳ್ಳುವು–ದಾಗಿದೆ, ಅಂಧಕಾರಕ್ಕೆ ಬೆನ್ನು ತಿರುಗಿಸುವುದಾಗಿದೆ. "ನಿಮಗೆ ಸಾಧ್ಯವಾಗದು, ನೀವು ಕೈಕೊಳ್ಳುವುದಿಲ್ಲ, ಅನರ್ಹರಾಗಿದ್ದೀರಿ, ಕನಸೊಂದರ ಗೊಂಬೆಯಾಗಿದ್ದೀರಿ" ಎಂದು ಪಟ್ಟು ಹಿಡಿದು ಕೂಗುವ ಧ್ವನಿಗಳನ್ನು ತಿರಸ್ಕರಿಸುವುದಾಗಿದೆ, ಏಕೆಂದರೆ ಇವು ಶತ್ರುಗಳ ಧ್ವನಿಗಳು, ಅವು ಮನುಷ್ಯ ದೊರಕಿಸಬಹುದಾದ ಪರಿಣಾಮವನ್ನು ಅವುಗಳ ಕರ್ಣಕಠೋರ ಗಲಭೆಯ ಮೂಲಕ ಕತ್ತರಿಸಿ ಹಾಕುತ್ತವೆ ನಂತರ ವಿಜಯೋತ್ಸವದಿಂದ ಅದರ ನಿಷ್ಫಲತೆಯನ್ನು ತಮ್ಮ ಪ್ರತಿಪಾದಿಸಬೇಕಾದ ವಿಷಯಕ್ಕೆ ಪ್ರಮಾಣವೆಂದು ತೋರಿಸಿಕೊಡುತ್ತವೆ. ಪ್ರಯತ್ನದ ತೊಂದರೆ ತಿಳಿದು ಬಂದ ವಿಷಯ, ಆದರೆ ಕಠಿಣವಾದದ್ದು ಅಸಾಧ್ಯವಾಗಿರುವುದಿಲ್ಲ. ಯಾವಾಗಲೂ ಕಠಿಣವಾದದ್ದನ್ನು ಸಿದ್ಧಿಸಿಕೊಳ್ಳಲಾಗಿರುತ್ತದೆ ಮತ್ತು ತೊಂದರೆಗಳ ಮೇಲೆ ಜಯ ಜಗತ್ತಿನ ಇತಿಹಾಸದಲ್ಲಿ ಮೌಲ್ಯವಾದದ್ದನ್ನೆಲ್ಲ ತಯಾರು ಮಾಡುತ್ತದೆ. ಆಧ್ಯಾತ್ಮಿಕ ಪ್ರಯತ್ನದಲ್ಲಿಯೂ ಕೂಡ ಅದು ಹಾಗೆ ಆಗುತ್ತದೆ.

**CWSA, 29/100** – ಶ್ರೀ ಅರವಿಂದರು

*

**ದೃಢವಾದ ನಂಬಿಕೆಯನ್ನು ಕಾಪಾಡಿಕೊಂಡು ಬರಬೇಕು**

ಯಾವುದೇ ಎದೆಗುಂದುವಿಕೆ ನಿಮ್ಮ ಮೇಲೆ ಬರುವುದಕ್ಕೆ ಅನುವು ಮಾಡಿಕೊಡುವುದು ಬೇಡ ಮತ್ತು ದೈವೀ ಕೃಪೆಯಲ್ಲಿ ಅಪನಂಬಿಕೆ ಬೇಡ. ಹೊರಗಿರುವ ತೊಂದರೆಗಳೇನೇ ಇರಲಿ, ನಿಮ್ಮೊಳಗಿರುವ ದೌರ್ಬಲ್ಯಗಳೇನೇ ಇರಲಿ, ನಿಮ್ಮ ನಂಬಿಕೆ ಹಾಗೂ ಅಭೀಪ್ಸೆಗಳ ಮೇಲೆ ದೃಢವಾದ ಹಿಡಿತವನ್ನು ಕಾಪಾಡಿಕೊಂಡು ಬಂದರೆ ರಹಸ್ಯ ದೈವೀ ಶಕ್ತಿ ಅವುಗಳಾದ್ಯಂತ ನಿಮ್ಮನ್ನು

ಕೊಂಡೊಯ್ಯುತ್ತದೆ ಮತ್ತು ನಿಮ್ಮನ್ನು ಮರಳಿ ಇಲ್ಲಿಗೆ ಕರೆದುಕೊಂಡು ಬರುತ್ತದೆ. ವಿರೋಧ ಹಾಗೂ ತೊಂದರೆಗಳು ಇವುಗಳಿಂದ ದಮನಕ್ಕೊಳಗಾದರೆ, ಎಡವಿ ಬಿದ್ದಿದ್ದರೆ, ನಿಮಗೆ ಮಾರ್ಗ ಮುಚ್ಚಿ ಹೋಗಿದೆ ಎನಿಸಿದರೂ ನಿಮ್ಮ ಅಭೀಪ್ಸೆಯ ಮೇಲೆ ಹಿಡಿತ ಸಾಧಿಸಬೇಕು, ಕೆಲಕಾಲ ನಂಬಿಕೆ ಮಸುಕಾಗಿದ್ದರೆ ನಿಮ್ಮ ಮನಸ್ಸಿನಲ್ಲಿ ಹಾಗೂ ಹೃದಯದಲ್ಲಿ ನಮ್ಮತ್ತ ಹೊರಳಿರಿ ಮತ್ತು ಅದನ್ನು ತೆಗೆದು ಹಾಕಲಾಗುವುದು.

**CWSA, 29/101** **– ಶ್ರೀ ಅರವಿಂದರು**

*

ಪರೀಕ್ಷಾ ಪ್ರಕ್ರಿಯೆಯ ಕ್ಷಣಗಳಲ್ಲಿ ಭಗವಂತನ ರಕ್ಷಣೆಯಲ್ಲಿ ನಂಬಿಕೆ ಮತ್ತು ಆ ರಕ್ಷಣೆಗಾಗಿ ಕರೆ ಕೊಡುವಿಕೆ ಇರಬೇಕು, ಎಲ್ಲ ಕಾಲದಲ್ಲಿ ಭಗವಂತ ಸಂಕಲ್ಪಿಸಿದ್ದು ಅತ್ಯಂತ ಒಳ್ಳೆಯದಾಗಿರುತ್ತದೆ ಎಂಬ ನಂಬಿಕೆಯಿರಬೇಕು.

**CWSA, 29/101** **– ಶ್ರೀ ಅರವಿಂದರು**

*

**ಈ ಯೋಗದಲ್ಲಿರುವ ಇಡೀ ತತ್ವ**

ಈ ಯೋಗದಲ್ಲಿರುವ ಇಡೀ ತತ್ವ ದೈವೀ ಪ್ರಭಾವಕ್ಕೆ ತೆರೆದಿರಿಸಿ–ಕೊಳ್ಳುವುದಾಗಿದೆ. ಅದು ಅಲ್ಲಿ ನಿಮ್ಮ ಮೇಲ್ಗಡೆ ಇದೆ, ಮತ್ತು ಒಮ್ಮೆ ನೀವು ಅದರ ಬಗ್ಗೆ ಪ್ರಜ್ಞೆಯುಳ್ಳವರಾಗಲು ಸಾಧ್ಯವಾದರೆ ನಿಮ್ಮಲ್ಲಿ ಇಳಿದು ಬರಲು ಅದಕ್ಕೆ ಕರೆ ಕೊಡಿರಿ. ಅದು ಮನಸ್ಸಿನಲ್ಲಿ ಹಾಗೂ ದೇಹದಲ್ಲಿ ಶಾಂತಿ, ಪ್ರಕಾಶ ಹಾಗೂ ಕಾರ್ಯಕೈಕೊಳ್ಳುವ ದೈವೀ ಶಕ್ತಿ, ರೂಪ ತಾಳಿರುವ ಇಲ್ಲ ತಾಳಿರದ ದೈವೀ ಸಾನ್ನಿಧ್ಯ, ಆನಂದ ಇವುಗಳ ರೂಪದಲ್ಲಿ ಬರುತ್ತದೆ. ಈ ಪ್ರಜ್ಞೆ ಹೊಂದುವುದಕ್ಕಿಂತ ಮೊದಲು ಮನುಷ್ಯನಲ್ಲಿ ನಂಬಿಕೆಯಿರಬೇಕು ಮತ್ತು ಅವನು ತೆರೆದಿರಿಸಿ–ಕೊಳ್ಳುವುದಕ್ಕಾಗಿ ಅಭೀಪ್ಸೆ ಪಡಬೇಕು. ಅಭೀಪ್ಸೆ, ಕರೆ ಕೊಡುವಿಕೆ, ಪ್ರಾರ್ಥನೆ ಇವೆಲ್ಲ ಒಂದೇ ವಿಷಯದ ಭಿನ್ನ ರೂಪಗಳು ಮತ್ತು ಎಲ್ಲವೂ ಪರಿಣಾಮಕಾರಿಯಾಗಿರುತ್ತವೆ. ನಿಮ್ಮ ಹತ್ತಿರ ಬಂದ ಇಲ್ಲವೆ ನಿಮಗೆ ಸುಲಭವೆನಿಸುವ ರೂಪವನ್ನು ಕೈಗೆತ್ತಿಕೊಳ್ಳಬೇಕು. ಇನ್ನು ಬೇರೆ ರೀತಿಯೆಂದರೆ ಏಕಾಗ್ರತೆ ಕೈಕೊಳ್ಳುವುದಾಗಿದೆ. ನೀವು ನಿಮ್ಮ ಪ್ರಜ್ಞೆಯನ್ನು ಹೃದಯದಲ್ಲಿ ಏಕಾಗ್ರಗೊಳಿಸುತ್ತೀರಿ (ಕೆಲವರು ಶಿರದಲ್ಲಿ, ಶಿರದ ಮೇಲೆ ಅದನ್ನು

ಕೈಕೊಳ್ಳುತ್ತಾರೆ.) ಮತ್ತು ಶ್ರೀಮಾತೆಯವರನ್ನು ಕುರಿತು ಧ್ಯಾನ ಮಾಡುತ್ತೀರಿ ಮತ್ತು ಅಲ್ಲಿಗೆ ಬರಲು ಅವರಿಗೆ ಕರೆ ಕೊಡುತ್ತೀರಿ. ಅವೆರಡು ವಿಧಾನಗಳಲ್ಲಿ ಮನುಷ್ಯ ಯಾವುದನ್ನಾದರೂ ಕೈಕೊಳ್ಳಬಹುದು ಇಲ್ಲವೆ ಅವೆರಡನ್ನೂ ಬೇರೆ, ಬೇರೆ ಸಮಯಗಳಲ್ಲಿ ಕೈಕೊಳ್ಳಬಹುದು – ಸ್ವಾಭಾವಿಕವಾಗಿ ಬರುವಂತಹದನ್ನು, ಇಲ್ಲವೆ ಯಾವುದೊಂದನ್ನು ಕೈಕೊಳ್ಳಬೇಕೆಂಬ ಚಲನೆಯುಂಟಾದಾಗ ಅಂತಹದನ್ನು ಕೈಕೊಳ್ಳಬಹುದು. ವಿಶೇಷವಾಗಿ ಪ್ರಾರಂಭದ ಹಂತದಲ್ಲಿ ಇರುವ ಒಂದು ದೊಡ್ಡ ಆವಶ್ಯಕತೆ ಎಂದರೆ ಮನಸ್ಸನ್ನು ಅಚಂಚಲಗೊಳಿಸುವುದಾಗಿದೆ, ಧ್ಯಾನದ ಸಮಯದಲ್ಲಿ ಸಾಧನೆಗೆ ಪರಕೀಯವಾದ ಎಲ್ಲ ಯೋಚನೆಗಳನ್ನು ಮತ್ತು ಚಲನೆಗಳನ್ನು ತಿರಸ್ಕರಿಸುವುದಾಗಿದೆ. ಅಚಂಚಲವಾದ ಮನಸ್ಸಿನಲ್ಲಿ ಅನುಭವಕ್ಕಾಗಿ ಪ್ರಗತಿಪರ ತಯಾರು ಇರುತ್ತದೆ. ಆದರೆ ಎಲ್ಲವನ್ನೂ ಒಮ್ಮೆಗೆ ಕೈಕೊಳ್ಳಲು ಸಾಧ್ಯವಾಗದಿದ್ದರೆ ತಾಳ್ಮೆ ಕಳೆದುಕೊಳ್ಳಬಾರದು, ಮನಸ್ಸಿನಲ್ಲಿ ಇಡಿಯಾದ ಅಚಂಚಲತೆಯನ್ನು ತಂದುಕೊಳ್ಳಲು ಕಾಲ ಬೇಕಾಗುತ್ತದೆ, ಪ್ರಜ್ಞೆ ತಯಾರಾಗುವ–ವರೆಗೆ ನೀವು ಮುಂದುವರಿಯುತ್ತ ಸಾಗಬೇಕು.

**CWSA, 29/106** **– ಶ್ರೀ ಅರವಿಂದರು**

*

**ಮನುಷ್ಯ ತೆರೆದಿರಿಸಿಟ್ಟುಕೊಳ್ಳಲು ಶಕ್ತನಾಗಿರುವನೋ ಇಲ್ಲವೋ ಎಂಬುದರ ಮೇಲೆ ಎಲ್ಲವೂ ಅವಲಂಬಿಸಿರುತ್ತದೆ**

ಈ ಯೋಗದಲ್ಲಿ ಏಕಾಗ್ರತೆ ಕೈಕೊಳ್ಳುವುದರ ಹೊರತಾಗಿ ಬೇರೆ ವಿಧಾನವಿಲ್ಲ, ಅದನ್ನು ಹೃದಯದಲ್ಲಿ ಕೈಕೊಳ್ಳುವುದಕ್ಕೆ ಆದ್ಯತೆ ನೀಡಬೇಕು ಮತ್ತು ಸತ್ತೆಯನ್ನು ಕೈಗೆತ್ತಿಕೊಳ್ಳಲು ಮತ್ತು ತಮ್ಮ ಸಾಮರ್ಥ್ಯದಿಂದ ಪ್ರಜ್ಞೆಯನ್ನು ಪರಿವರ್ತನೆ–ಗೊಳಪಡಿಸಲು ಶ್ರೀಮಾತೆಯವರ ದೈವೀ ಸಾನ್ನಿಧ್ಯ ಹಾಗೂ ಸಾಮರ್ಥ್ಯಗಳಿಗೆ ಕರೆ ಕೊಡಬೇಕು. ಮನುಷ್ಯ ಶಿರದಲ್ಲಿ ಇಲ್ಲವೆ ಹುಬ್ಬುಗಳ ಮಧ್ಯೆ ಕೂಡ ಏಕಾಗ್ರತೆ ಕೈಕೊಳ್ಳಬಹುದು. ಆದರೆ ಅದು ಬಹಳಷ್ಟು ಜನರಿಗೆ ಬಹಳ ಶ್ರಮದಾಯಕ ತೆರೆದಿರಿಸಿಕೊಳ್ಳುವಿಕೆಯಾಗಿರುತ್ತದೆ. ಮನಸ್ಸು ಅಚಂಚಲತೆಯಲ್ಲಿ ಉಳಿದುಕೊಂಡಾಗ ಮತ್ತು ಏಕಾಗ್ರತೆ ದೃಢವಾದಾಗ, ಅಭೀಪ್ಸೆ ಗಾಢವಾದಾಗ ಅನುಭವದ ಆರಂಭವಾಗುತ್ತದೆ. ನಂಬಿಕೆ ಹೆಚ್ಚಾದ ಹಾಗೆ ಪರಿಣಾಮ ಹೆಚ್ಚು ತೀವ್ರಗತಿಯ–ದಾಗಬಹುದು. ಉಳಿದದ್ದಕ್ಕಾಗಿ ಮನುಷ್ಯ ಕೇವಲ ತನ್ನದೇ ಪ್ರಯತ್ನಗಳ ಮೇಲೆ ಅವಲಂಬಿಸಿರಬಾರದು, ಭಗವಂತನೊಡನೆ ಸಂಪರ್ಕ ಸ್ಥಾಪಿಸಿಕೊಳ್ಳುವುದರಲ್ಲಿ

ಮತ್ತು ಶ್ರೀಮಾತೆಯವರ ದೈವೀ ಸಾಮರ್ಥ್ಯ ಮತ್ತು ದೈವೀ ಸಾನ್ನಿಧ್ಯ ಇವುಗಳನ್ನು ಗ್ರಹಿಸುವುದರಲ್ಲಿ ಯಶಸ್ವಿಯಾಗಬೇಕು.

**CWSA, 29/107** **– ಶ್ರೀ ಅರವಿಂದರು**

*

**ನಂಬಿಕೆ ಹಾಗೂ ವಿರೋಧೀ ಶಕ್ತಿಗಳು**

ನಿಮ್ಮ ಸ್ವಭಾವ ಎಷ್ಟೇ ಮೇಲೆದ್ದು ಬಂದಾಗ್ಯೂ ಇಲ್ಲವೆ ವಿರೋಧೀ ಶಕ್ತಿಗಳು ಆಕ್ರಮಣ ಮಾಡಿದಾಗಲೂ ವಿಜಯ ನಿಮ್ಮದಾಗುತ್ತದೆ ಮತ್ತು ಪರಿವರ್ತನೆ ನಿಶ್ಚಿತ ಎಂಬ ನಂಬಿಕೆಯನ್ನು ನೀವು ಯಾವಾಗಲೂ ಕಾಪಾಡಿಕೊಂಡು ಬರಬೇಕು.

*

ದೈವೀ ಪ್ರಕಾಶದ ವಿಷಯದಲ್ಲಿ ದೃಢವಾದ ನಂಬಿಕೆಯಿರಿಸುವುದನ್ನು ಕಾಪಾಡಿಕೊಂಡು ಬರಬೇಕು, ಮತ್ತು ಭೌತದ್ರವ್ಯದ ಹಾಗೂ ಮಾನವ ವ್ಯಕ್ತಿ ವಿಶಿಷ್ಟತೆಯ ಪ್ರತಿರೋಧಗಳು ಇವು ತಮ್ಮದೇ ಪರಿವರ್ತನೆ ಪಡೆಯಲೆಂದು ಸ್ಥಿರ ಸಮತೆಯಿಂದ ಅವುಗಳನ್ನು ಎದುರಿಸಿರಿ.

*

ಹೆಚ್ಚಿನ ಮಟ್ಟದ ಅಂಧಕಾರವಿದ್ದಾಗ್ಯೂ – ಈ ಜಗತ್ತು ಅದರಿಂದ ತುಂಬಿಕೊಂಡಿದೆ, ಹಾಗೆಯೇ ಮನುಷ್ಯನ ಭೌತಿಕ ಸ್ವಭಾವ ಕೂಡ ಅಂಧಕಾರದಿಂದ ತುಂಬಿಕೊಂಡಿದೆ – ಆದಾಗ್ಯೂ ದೈವೀ ಪ್ರಕಾಶದ ಒಂದು ಕಿರಣ ಕೊನೆಗೆ ಹತ್ತು ಪಟ್ಟು ಅಂಧಕಾರದ ಮೇಲೆ ಪ್ರಾಬಲ್ಯ ಪಡೆಯಬಹುದು. ಅದನ್ನು ನೆಚ್ಚಿಕೊಳ್ಳಿರಿ ಹಾಗೂ ಅದಕ್ಕೆ ಅಂಟಿಕೊಳ್ಳಿರಿ.

**CWSA, 29/101–102** **– ಶ್ರೀ ಅರವಿಂದರು**

*

**ಗುರುವಿನಲ್ಲಿ ನಂಬಿಕೆ**

ಅನುಯಾಯಿ ಆಧ್ಯಾತ್ಮಿಕ ಮಾರ್ಗದರ್ಶಕನೊಂದಿಗೆ ಸಂಬಂಧ ಇಟ್ಟುಕೊಂಡು ಆ ಸಂಬಂಧದಿಂದ ಪೂರ್ತಿ ಲಾಭವನ್ನು ಪಡೆಯುವುದಕ್ಕೆ ಮೂರು ನಿಬಂಧನೆಗಳಿವೆ:

1. ಮನುಷ್ಯ ಮಾರ್ಗದರ್ಶಕನನ್ನು ಮಾತ್ರ ಪೂರ್ತಿ ಒಪ್ಪಿಕೊಳ್ಳಬೇಕು,

ಯಾವುದೇ ವಿರೋಧೀ ಇಲ್ಲವೆ ಎರಡನೆಯ ಪ್ರಭಾವಕ್ಕೆ ತನ್ನನ್ನು ಅಧೀನಗೊಳಿಸಿಕೊಳ್ಳಬಾರದು.

2. ಗುರು ನೀಡಿದ ಸೂಚನೆಗಳನ್ನು ಒಪ್ಪಿಕೊಳ್ಳಬೇಕು ಮತ್ತು ಅವುಗಳನ್ನು ದೃಢವಾದ, ಪೂರ್ತಿ ನಂಬಿಕೆಯಿಂದ, ಪಟ್ಟುಹಿಡಿಯುವಿಕೆಯಿಂದ ತನ್ನದೇ ಆಧ್ಯಾತ್ಮಿಕ ಕ್ಷಮತೆಯಿಂದ ಸಾಧ್ಯವಾಗುವಷ್ಟು ಅತ್ಯಂತ ಒಳ್ಳೆಯ ರೀತಿಯಲ್ಲಿ ಅನುಸರಿಸಬೇಕು.

3. ಅನುಯಾಯಿ ತನ್ನ ಮನಸ್ಸಿಗೆ ಗುರು ಬೋಧಿಸುವುದನ್ನು ಮತ್ತು ಬೋಧಿಸುವುದಕ್ಕಿಂತ ಹೆಚ್ಚಿನದನ್ನು ತಿಳಿದುಕೊಳ್ಳಲು ತನ್ನನ್ನು ತೆರೆದಿರಿಸಿ–ಕೊಂಡಿರಬೇಕು, ಹೆಚ್ಚಿನ ರೀತಿಯಲ್ಲಿ ಗ್ರಹಣಾಕಾಂಕ್ಷಿ (receptive) ಆಗಿರಬೇಕು. ಗುರು ಆಧ್ಯಾತ್ಮಿಕವಾಗಿ ಏನಾಗಿದ್ದಾನೆ, ಅವನ ಆಧ್ಯಾತ್ಮಿಕ ಪ್ರಜ್ಞೆ, ಜ್ಞಾನ, ಪ್ರಕಾಶ, ಸಾಮರ್ಥ್ಯ ಎಂತಹವಿವೆ, ಅವನಲ್ಲಿರುವ ದೈವಿಕತೆ ಎಂತಹದಿದೆ ಎಂಬುದನ್ನು ಅರಿತುಕೊಳ್ಳಬೇಕು. ಅನುಯಾಯಿ ತನ್ನಲ್ಲಿ ಅದೆಲ್ಲವನ್ನೂ ಸ್ವೀಕರಿಸುವುದರ ಮೂಲಕ ಅಭಿವೃದ್ಧಿ ಹೊಂದುತ್ತಾನೆ, ಅದನ್ನು ತನ್ನೊಳಗೆ ಉಪಯೋಗಿಸುವುದರ ಮೂಲಕ ತನ್ನ ಪ್ರಜ್ಞೆ ಮತ್ತು ಸ್ವಭಾವ ಇವು ತಮ್ಮದೇ ದೈವೀ ಸಾಧ್ಯತೆಯನ್ನು ಅಭಿವೃದ್ಧಿಗೊಳಿಸಿಕೊಳ್ಳುವಂತಾಗುತ್ತದೆ.

*

ಗುರು ಸಾಧಕನಿಗಾಗಿ ಏನು ಮಾಡಬಲ್ಲ ಎಂಬುದು ಸಾಧಕನ ಗ್ರಹಣಾಕಾಂಕ್ಷೆ (receptivity)ಯ ಮೇಲೆ ಅವಲಂಬಿಸಿರುತ್ತದೆ – ಸಾಧನೆಯ ಯಾವುದೇ ವಿಧಾನ ಇಲ್ಲವೆ ನಿಯಮದ ಮೇಲಲ್ಲ. ಪ್ರಜ್ಞೆಯ ಕೆಲವೊಂದು ಮನೋವೈಜ್ಞಾನಿಕ ಸ್ಥಿತಿಗಳು ಇಲ್ಲವೆ ಮನೋಭಾವಗಳು ಗ್ರಹಣಾಕಾಂಕ್ಷೆಯನ್ನು ಹೆಚ್ಚಿಸುವ ಪ್ರವೃತ್ತಿ ಹೊಂದಿರುತ್ತವೆ. ಉದಾಹರಣೆಗೆ ಗುರುವಿನತ್ತ ವಿನಮ್ರತೆ, ಭಕ್ತಿ, ವಿಧೇಯತೆ, ವಿಶ್ವಾಸ, ಗುರುವಿನ ಪ್ರಭಾವಕ್ಕೆ ಒಂದು ಬಗೆಯ ಗ್ರಹಣಾಕಾಂಕ್ಷಿ ನಿಷ್ಕ್ರಿಯತೆ. ಇದಕ್ಕೆ ವಿರುದ್ಧವಾದ ವಿಷಯಗಳು – ಸ್ವಾತಂತ್ರ್ಯ, ವಿಮರ್ಶಾತ್ಮಕ ಮನೋಭಾವ, ಪ್ರಶ್ನಿಸುವಿಕೆಗಳು – ಇನ್ನೊಂದು ದಿಶೆಯಲ್ಲಿ ಸಾಗುತ್ತವೆ ಮತ್ತು ಗುರು ಕೇವಲ ಪರೋಕ್ಷವಾಗಿ ಇಲ್ಲವೆ ಪರದೆಯ ಹಿಂದಿದ್ದು ಸಹಾಯ ಮಾಡುವ ಆವಶ್ಯಕತೆ ಕಂಡುಕೊಳ್ಳುತ್ತಾನೆ. ಮುಖ್ಯವಾದ ವಿಷಯ ಪ್ರಜ್ಞೆಯಲ್ಲಿ ಒಂದು ಬಗೆಯ ಮನೋವೈಜ್ಞಾನಿಕ ತೆರೆದಿಟ್ಟುಕೊಳ್ಳುವಿಕೆಯಾಗಿದೆ, ಅದು ಸ್ವೀಕರಿಸುವುದಕ್ಕಾಗಿರುವ ಸಂಕಲ್ಪ ಮತ್ತು ಸರಿಯಾದ ಮನೋಭಾವ ಇವುಗಳ

ಸಹಾಯದಿಂದ ಬರುತ್ತದೆ ಇಲ್ಲವೆ ಹೆಚ್ಚಾಗುತ್ತ ಹೋಗುತ್ತದೆ. ಅದು ಅಲ್ಲಿದ್ದರೆ ಆಗ ಗುರುವಿನಿಂದ ಏನನ್ನಾದರೂ ಎಳೆದುಕೊಳ್ಳುವ ಆವಶ್ಯಕತೆ ಇರುವುದಿಲ್ಲ, ಕೇವಲ ಅಚಂಚಲರಾಗಿ ಸ್ವೀಕರಿಸುವುದಷ್ಟೇ ಇರುತ್ತದೆ.

**CWSA, 29/190–91** **– ಶ್ರೀ ಅರವಿಂದರು**

*

**ಆತ್ಮದ ರವಿ ಪ್ರಕಾಶಿತ ಮಾರ್ಗ**

ಚೈತ್ಯ ಸತತ ಇಲ್ಲವೆ ಸಾಮಾನ್ಯವಾಗಿ ಮುಂಭಾಗಕ್ಕೆ ಇದ್ದರೆ ಇಲ್ಲವೆ ಮನುಷ್ಯನಲ್ಲಿ ನಂಬಿಕೆಯ ಮತ್ತು ಶರಣಾಗತಿಯ ಸ್ವಾಭಾವಿಕ ಮನೋಭಾವ– ವಿದ್ದರೆ, ಇಲ್ಲವೆ ಸೂರ್ಯನತ್ತ ಇಲ್ಲವೆ ಚೈತ್ಯಾತ್ಮಿಕ ಒಲವಿನತ್ತ ಮುಖ ರೂಢಿಗತವಾಗಿ ಹೊರಳಿಕೊಂಡಿದ್ದರೆ (ಉದಾಹರಣೆಗೆ ಮನುಷ್ಯ ತನ್ನ ಆಧ್ಯಾತ್ಮಿಕ ಅದೃಷ್ಟ) ಇಲ್ಲವೆ ಅವನು ಚೈತ್ಯಾತ್ಮಿಕ ಹೊರಳುವಿಕೆಯನ್ನು ದೊರಕಿಸಿದ್ದರೆ ಆಗ ಮಾತ್ರ ರವಿ ಪ್ರಕಾಶಿತ ಮಾರ್ಗವನ್ನು ಅನುಸರಿಸಬಹುದು. ಅದರರ್ಥ ರವಿ ಪ್ರಕಾಶಿತ ಮನುಷ್ಯನಿಗೆ ತೊಂದರೆಗಳಿರುವುದಿಲ್ಲ ಎಂದಲ್ಲ, ಅವನಿಗೆ ಹಲವಾರು ತೊಂದರೆಗಳಿರಬಹುದು, ಆದರೆ ಅವನು " ದೈನಂದಿನ ಕಾರ್ಯದಲ್ಲಿರುವ ಎಲ್ಲವೂ" ಎನ್ನುವ ರೀತಿಯಲ್ಲಿ ಉತ್ಸಾಹದೊಂದಿಗೆ ಅವುಗಳನ್ನು ಪರಿಗಣಿಸುತ್ತಾನೆ. ಅವನಿಗೆ ಕೆಟ್ಟ ಹೊಡೆತಗಳು ಬಿದ್ದಾಗ: "ಅದು ವಿಚಿತ್ರ ರೀತಿಯದಾಗಿತ್ತು, ಆದರೆ ಸ್ಪಷ್ಟವಾಗಿ ಭಗವಂತ ವಿಚಿತ್ರ ಚಿತ್ತಸ್ಥಿತಿಯಲ್ಲಿದ್ದಾನೆ. ಮತ್ತು ಅದು ಅವನು ಕಾರ್ಯ ಕೈಕೊಳ್ಳುವ ರೀತಿಯಾಗಿದ್ದರೆ, ಅದು ಸರಿಯಾದದ್ದೇ ಆಗಿರಬೇಕು, ನಾನೇ ಸ್ವತಃ ನಿಶ್ಚಿತವಾಗಿ ಇನ್ನೂ ಹೆಚ್ಚು ವಿಚಿತ್ರ ಪ್ರಾಣಿಯಾಗಿದ್ದೇನೆ ಮತ್ತು ಅದು ಮಾತ್ರ ನನ್ನನ್ನು ಸರಿಯಾಗಿರಿಸುವ ಸಾಧನವಾಗಿತ್ತು" ಎಂದು ಹೇಳುವ ಕ್ಷಮತೆ ಹೊಂದಿರುತ್ತಾನೆ. ಆದರೆ ಪ್ರತಿಯೊಬ್ಬನಿಗೂ ಆ ಬಗೆಯ ಹೊರಳುವಿಕೆ ಇರುವುದಿಲ್ಲ ಮತ್ತು ಎಲ್ಲವನ್ನೂ ಸರಿಯಾಗಿರಿಸುವ ಶರಣಾಗತಿಯನ್ನು, ನೀನು ಹೇಳಿದ ಹಾಗೆ, ಸಂಪೂರ್ಣವಾಗಿ ಮಾಡಿಕೊಳ್ಳುವುದು ಕಠಿಣವಾದದ್ದು. ಆ ಕಾರಣದಿಂದಾಗಿಯೇ ನಾವು ಒಮ್ಮೆಗೆ ಇಡಿಯಾದ ಶರಣಾಗತಿ ಮಾಡಿಕೊಳ್ಳುವುದರ ಮೇಲೆ ಒತ್ತುಕೊಡುವುದಿಲ್ಲ, ಪ್ರಾರಂಭದಲ್ಲಿ ಸ್ವಲ್ಪ ಮಟ್ಟಿಗಿನ ಶರಣಾಗತಿಯಿಂದ ತೃಪ್ತರಾಗುತ್ತೇವೆ, ಉಳಿದದ್ದು ತನಗೆ ಸಾಧ್ಯವಾಗುವ ಹಾಗೆ ಬೆಳೆಯಬಲ್ಲದು.

**CWSA, 31/618** **– ಶ್ರೀ ಅರವಿಂದರು**

*

## ದೈವೀ ಕಾರ್ಯಗತಿ

... ನಂಬಿಕೆ, ಶರಣಾಗತಿ, ಈ ಮಾರ್ಗದಲ್ಲಿ ಅಗತ್ಯವಾಗಿರುವ ಧೈರ್ಯ ಇವು ಅಹಂಕಾರದ ಮೋಡ ಮುಸುಕಿರುವ ಆತ್ಮಕ್ಕೆ ಸುಲಭವಾದವುಗಳಲ್ಲ. ಅಹಂಮನ್ಯತೆ ಇರುವ ಮನಸ್ಸು ಬಯಸುವ ಇಲ್ಲವೆ ಒಪ್ಪಿಗೆ ನೀಡುವ ಕಾರ್ಯಗತಿ ದೈವೀ ಕಾರ್ಯಗತಿಯಾಗಿರುವುದಿಲ್ಲ. ದೈವಿಕವಲ್ಲದ ಕಾರ್ಯಗತಿ ಸತ್ಯದತ್ತ ತಲುಪುವುದಕ್ಕಾಗಿ ದೋಷವನ್ನು, ದಿವ್ಯಾನಂದತ್ತ ತಲುಪಲು ವೇದನೆಯನ್ನು, ಪರಿಪೂರ್ಣತೆಯತ್ತ ತಲುಪಲು ಅಪರಿಪೂರ್ಣತೆಯನ್ನು ಉಪಯೋಗಿಸುತ್ತದೆ. ತನ್ನನ್ನು ಎಲ್ಲಿಗೆ ಕರೆದೊಯ್ಯಲಾಗುತ್ತದೆ ಎಂಬುದನ್ನು ಅಹಂಕಾರ ಕಂಡುಕೊಳ್ಳಲಾರದು, ಅದು ಗಾಢ ನಂಬಿಕೆಯನ್ನು, ಧೈರ್ಯವನ್ನು ಕಳೆದುಕೊಳ್ಳುತ್ತದೆ. ಈ ವಿಫಲತೆಗಳು ಮಹತ್ವದವಾಗುವುದಿಲ್ಲ, ಏಕೆಂದರೆ ಅಂತರಂಗದೊಳಗಿರುವ ದೈವೀ ಮಾರ್ಗದರ್ಶಿ ನಮ್ಮ ಬಂಡಾಯದಿಂದ ಜುಗುಪ್ಸೆಪಟ್ಟುಕೊಳ್ಳುವುದಿಲ್ಲ, ನಮ್ಮಲ್ಲಿರುವ ನಂಬಿಕೆಯ ಕೊರತೆಯಿಂದ ಎದೆಗುಂದುವುದಿಲ್ಲ, ನಮ್ಮ ದೌರ್ಬಲ್ಯದಿಂದ ಹಿಮ್ಮೆಟ್ಟುವುದಿಲ್ಲ; ಅವನಲ್ಲಿ ಮಾತೆಯ ಇಡಿಯಾದ ಪ್ರೇಮವಿದೆ, ಶಿಕ್ಷಕನ ಇಡಿಯಾದ ತಾಳ್ಮೆಯಿದೆ, ಆ ಮಾರ್ಗದರ್ಶನದಿಂದ ಹಿಂದೆಗೆದುಕೊಳ್ಳುವುದರ ಮೂಲಕ ನಾವು ಪ್ರಜ್ಞೆಯನ್ನು ಕಳೆದುಕೊಳ್ಳುತ್ತೇವೆ – ಆದಾಗ್ಯೂ ಎಲ್ಲ ವಾಸ್ತವಿಕೆಯನ್ನಲ್ಲ – ಯಾವುದೇ ಸಂದರ್ಭದಲ್ಲಿ ಸಂಭವಿಸಬಹುದಾದ ಸಂಗತಿಯನ್ನಲ್ಲ, ಪ್ರಯೋಜನವನ್ನಲ್ಲ. ನಮ್ಮ ಒಪ್ಪಿಗೆಯನ್ನು ಹಿಂತೆಗೆದುಕೊಳ್ಳುತ್ತೇವೆ, ಏಕೆಂದರೆ ನಿಮ್ನತರ ಸತ್ತೆಯಿಂದ ನಮ್ಮ ಉಚ್ಚತರ ದೈವೀ ಸತ್ತೆಯನ್ನು ಬೇರ್ಪಡಿಸಿ ಗುರುತಿಸುವುದರಲ್ಲಿ ವಿಫಲರಾಗಿರುತ್ತೇವೆ, ಆ ಉಚ್ಚತರ ಸತ್ತೆಯ ಮೂಲಕ ಭಗವಂತ ತನ್ನ ಸ್ವ–ಪ್ರಕಟಣೆಯನ್ನು ತಯಾರು ಮಾಡುತ್ತಿರುತ್ತಾನೆ. ಜಗತ್ತಿನಲ್ಲಿರುವ ಹಾಗೆಯೇ ನಮ್ಮಲ್ಲಿಯೂ ಕೂಡ ದೇವನನ್ನು ನಾವು ಕಾಣಲಾರೆವು ಅದಕ್ಕೆ ಕಾರಣ ಅವನ ಕಾರ್ಯಗತಿಗಳು; ವಿಶೇಷವಾಗಿ ಏಕೆಂದರೆ ಅವನು ನಮ್ಮಲ್ಲಿ ನಮ್ಮ ಸ್ವಭಾವದ ಮೂಲಕ ಕಾರ್ಯಮಾಡುತ್ತಾನೆ, ಒಂದರ ನಂತರ ಒಂದರಂತೆ ಬರುವ ಸ್ವೇಚ್ಛಾ ರೀತಿಯ ಪವಾಡಗಳ ಮೂಲಕವಲ್ಲ. ತನ್ನಲ್ಲಿ ನಂಬಿಕೆ ಉಂಟಾಗಲೆಂದು ಮನುಷ್ಯ ಪವಾಡಗಳನ್ನು ಒತ್ತಾಯಪೂರ್ವಕವಾಗಿ ಬೇಡುತ್ತಾನೆ. ತನಗೆ ಕಣ್ಣು ಕೋರೈಸುವಂತೆ ನೋಡಲಾಗಬೇಕೆಂದು ಬಯಸುತ್ತಾನೆ. ದೈವೀ ಕರೆದೊಯ್ಯುವಿಕೆಯ ವಿರುದ್ಧವಿರುವ ನಮ್ಮ ಬಂಡಾಯದಲ್ಲಿ, ನಾವು ಬೇರೆ ಇನ್ನೊಂದು

ವಿರೂಪಗೊಳಿಸುವ ಮಹಾಶಕ್ತಿಗೆ ಕರೆ ಕೊಟ್ಟರೆ, ಅದು ನಮ್ಮ ಪ್ರಚೋದನೆಗಳಿಗೆ ಹಾಗೂ ಆಸೆಗಳಿಗೆ ಹೆಚ್ಚು ತೃಪ್ತಿ ನೀಡುತ್ತದೆಂದು ಭಾವಿಸಿದರೆ, ಅದಕ್ಕೆ ಮಾರ್ಗದರ್ಶನ ಮಾಡಲು ಕೇಳಿಕೊಂಡರೆ ಅದಕ್ಕೆ ದೈವಿಕವಾದ ಹೆಸರು ನೀಡಿದರೆ, ಈ ತಾಳ್ಮೆ ಕಳೆದುಕೊಳ್ಳುವಿಕೆ ಮತ್ತು ಈ ಅಜ್ಞಾನ ದೊಡ್ಡ ಅಪಾಯ ಮತ್ತು ವಿನಾಶಕಾರಕ ಆಗುವಂತೆ ತಿರುವು ಪಡೆಯಬಹುದು.

**CWSA, 23/64** – ಶ್ರೀ ಅರವಿಂದರು

*

**ಎಲ್ಲದರಲ್ಲೂ ಭಗವಂತ ನಮ್ಮ ಕೈ ಹಿಡಿಯುತ್ತಾನೆ**

ಅಲ್ಲಿ ಪರೀಕ್ಷೆಗೊಳಪಡಿಸುವ ಬಹು ಕಷ್ಟಕರ ವಿಷಯದಂತಹವುಗಳಲ್ಲಿ ಬಹಳಷ್ಟು ಇರುವ ಸಾಧ್ಯತೆಯಿದೆ, ಅವುಗಳನ್ನು ಕುರಿತು ವೈದಿಕ ಋಷಿಗಳೂ ಕೂಡ ಅಸಮಾಧಾನ ಸೂಚಿಸಿದ್ದಾರೆ, "ಪ್ರಕಾಶದಿಂದ ದೀರ್ಘ ಕಾಲದವರೆಗೆ ಗಡಿಪಾರುಗಳು ಇದ್ದ ಹಾಗೆ" ಎಂದು ಹೇಳುತ್ತಾರೆ, ಮತ್ತು ಇವು ಬಹಳ ದಟ್ಟವಾಗಿರುತ್ತವೆ, ಆತ್ಮದ ಮೇಲಿರುವ ನಿಶೆ ಎಷ್ಟೊಂದು ಕಪ್ಪಾಗಿರುತ್ತದೆಂದರೆ ನಂಬಿಕೆ ನಮ್ಮನ್ನು ಕೊನೆಯವರೆಗೆ ಬಿಟ್ಟುಹೋಗಿದೆಯೇನೋ ಎಂದು ತೋರಿಬರುವಂತಿರುತ್ತದೆ. ಆದರೆ ಅದರಾದ್ಯಂತ ಅಂತರಂಗದೊಳಗಿರುವ ಆತ್ಮ ತನ್ನ ಗೋಚರಿಸದ ಹಿಡಿತವನ್ನು ಕಾಪಾಡಿಕೊಂಡು ಬಂದಿರುತ್ತದೆ ಮತ್ತು ಆ ಆತ್ಮ ತನ್ನ ಭರವಸೆಗೆ ಹೊಸ ಬಲ ತಂದುಕೊಂಡು ಮರಳಿ ಬರುತ್ತದೆ, ಆ ಭರವಸೆಗೆ ಗ್ರಹಣ ಹಿಡಿದಿತ್ತು, ಅದು ನಂದಿಹೋಗಿರಲಿಲ್ಲ, ಏಕೆಂದರೆ ಒಮ್ಮೆ ಆಂತರಿಕ ಆತ್ಮ ತಿಳಿದುಕೊಂಡ ನಂತರ, ನಿರ್ಧಾರ ಕೈಕೊಂಡ ನಂತರ ನಂದಿಹೋಗುವುದು ಸಾಧ್ಯವಿಲ್ಲ. ಎಲ್ಲದರಲ್ಲೂ ಭಗವಂತ ನಮ್ಮ ಕೈ ಹಿಡಿದಿರುತ್ತಾನೆ, ಪತನಗೊಳ್ಳಲು ನಮಗೆ ಅನುವು ಮಾಡಿಕೊಡುತ್ತಿದ್ದಾನೆಂದು ತೋರಿಬಂದರೂ, ಅದು ನಮ್ಮನ್ನು ಇನ್ನೂ ಹೆಚ್ಚಿನ ಎತ್ತರಕ್ಕೆ ಮೇಲಕ್ಕೆತ್ತುವುದಕ್ಕಾಗಿರುತ್ತದೆ. ರಕ್ಷಿಸುವುದರ ಮರಳಿ ಬರುವಿಕೆಯ ಅನುಭವ ಎಷ್ಟೊಂದು ಸಲ ಮೇಲಿಂದ ಮೇಲೆ ಆಗುತ್ತದೆಂದರೆ ಸಂಶಯದ ನಿರಾಕರಣೆಗಳು ಅಸಾಧ್ಯವಾಗಿ ಬಿಡುತ್ತವೆ. ಮತ್ತು, ಸಮತೆಯ ತಳಹದಿಯನ್ನು ಸ್ಥಿರವಾಗಿ ಸ್ಥಾಪಿಸಿದ ನಂತರ ಮತ್ತು ಅದಕ್ಕೂ ಹೆಚ್ಚಾಗಿ ರಹಸ್ಯ ಆಧ್ಯಾತ್ಮಿಕ ಜ್ಞಾನದ ಸೂರ್ಯ ಮೇಲೆದ್ದು ಬಂದಾಗ ಸಂಶಯವೇ ಸ್ವತಃ ಸಾವನ್ನಪ್ಪುತ್ತದೆ, ಏಕೆಂದರೆ ಅದರ ಕಾರಣ ಹಾಗೂ ಉಪಯುಕ್ತತೆ ಕೊನೆಗೊಂಡಿರುತ್ತವೆ.

ಅದೇ ಕಾಲಕ್ಕೆ ಯಾವಾಗಲೂ, ನೆನಪಿನಲ್ಲಿ ಇಟ್ಟುಕೊಳ್ಳಬೇಕಾದುದೆಂದರೆ ನಾವು ಅಪರಿಪೂರ್ಣತೆಯಿಂದ ಹಾಗೂ ಅಜ್ಞಾನದಿಂದ ಪ್ರಕಾಶ ಹಾಗೂ ಪರಿಪೂರ್ಣತೆಗಳತ್ತ ಚಲಿಸುತ್ತಿದ್ದೇವೆ, ಮತ್ತು ನಮ್ಮ ನಂಬಿಕೆಯು ನಮ್ಮ ಪ್ರಯತ್ನದ ರೂಪಗಳು ಮತ್ತು ಒಂದರ ನಂತರ ಒಂದರಂತೆ ಬರುವ ಸಿದ್ಧಿಯ ಹಂತಗಳು ಇವುಗಳ ಆಸಕ್ತಿಯಿಂದ ಮುಕ್ತವಾಗಿರಬೇಕು. ಬಲವತ್ತರವಾಗಿ ಮೇಲಕ್ಕೆತ್ತಿ ಹಿಡಿಯಬೇಕಾದುದು ಅತಿ ಹೆಚ್ಚಿನ ರೀತಿಯಲ್ಲಿ ಇರುತ್ತದೆ, ಅದು ಹೊರಗೆ ಎಸೆದುಬಿಡುವುದಕ್ಕಾಗಿ ಹಾಗೂ ತಿರಸ್ಕರಿಸುವುದಕ್ಕಾಗಿರುತ್ತದೆ. ಅಜ್ಞಾನ ಹಾಗೂ ನಿಮ್ಮ ಪ್ರಕೃತಿಯ ಸಾಮರ್ಥ್ಯಗಳು ಹಾಗೂ ಅವುಗಳ ಸ್ಥಾನದಲ್ಲಿ ಬರಬೇಕಾದ ಉಚ್ಚತರ ಸಾಮರ್ಥ್ಯಗಳು ಇವುಗಳ ನಡುವೆ ಸಮರವಿರುತ್ತದೆ, ಇಷ್ಟೇ ಅಲ್ಲದೆ (ಆಧ್ಯಾತ್ಮಿಕ) ಮಾರ್ಗದಲ್ಲಿ ಸಹಾಯಕವಾಗುವುದರ ಕಾರಣದಿಂದಾಗಿ ಒಪ್ಪಿಕೊಳ್ಳಬೇಕಾದ ಅನುಭವಗಳು, ಯೋಚನೆಯ ಹಾಗೂ ಭಾವನೆಯ ಸ್ಥಿತಿಗಳು, ಸಿದ್ಧಿಯ ರೂಪಗಳು ಇರುತ್ತವೆ. ಅವು ಕೆಲಕಾಲ ಆಧ್ಯಾತ್ಮಿಕವಾಗಿ ಕೊನೆಯವೆಂದು ತೋರಿಬರಬಹುದು, ಆದರೆ ಅವುಗಳು ಸಂಕ್ರಮಣದ ಹೆಜ್ಜೆಗಳೆಂದು ಕಂಡುಬರುವವು, ಅವುಗಳನ್ನು ಮೀರಿ ಹೋಗಬೇಕಾಗುವುದು ಮತ್ತು ಅವುಗಳಿಗೆ ಆಧಾರವಾಗಿದ್ದ ರೀತಿಯಲ್ಲಿ ಕಾರ್ಯ ಕೈಕೊಳ್ಳುತ್ತಿದ್ದ ನಂಬಿಕೆಯನ್ನು ಇತರ ಶ್ರೇಷ್ಠತರ ವಿಷಯಗಳ ಇಲ್ಲವೆ ಹೆಚ್ಚು ಪೂರ್ತಿಯಾದ ಮತ್ತು ಗ್ರಹಿಸಬಲ್ಲ ಸಿದ್ಧಿಗಳ ಹಾಗೂ ಅನುಭವಗಳ ಪರವಾಗಿ ಹಿಂತೆಗೆದುಕೊಳ್ಳಬೇಕಾಗುತ್ತದೆ. ಹಿಂತೆಗೆದುಕೊಳ್ಳಬೇಕಾದ ವಿಷಯಗಳ ಸ್ಥಾನದಲ್ಲಿ ಈ ಶ್ರೇಷ್ಠತರ ವಿಷಯಗಳು ಬರುವವು ಇಲ್ಲವೆ ಆ ವಿಷಯಗಳನ್ನು ಸಂಪೂರ್ಣ–ಗೊಳಿಸುವ ಪರಿವರ್ತನೆಗಾಗಿ ಅವುಗಳನ್ನು ಕೈಗೆತ್ತಿಕೊಳ್ಳಬೇಕಾಗುವುದು.

**CWSA, 24/775–76** **– ಶ್ರೀ ಅರವಿಂದರು**

*

## ದೈವೀ ವಿವೇಕದಲ್ಲಿ ವಿಶ್ವಾಸವನ್ನಿರಿಸಬೇಕು

ನಾನು ಬಲ ಮತ್ತು ದೈವೀ ಕೃಪೆ ಇವುಗಳನ್ನು ಕುರಿತು ಹೇಳುತ್ತಿರುವುದರಲ್ಲಿ ತಿಳಿದುಕೊಳ್ಳಲು ಕಷ್ಟಸಾಧ್ಯವಾದದ್ದೇನೂ ಇಲ್ಲ. ಆಧ್ಯಾತ್ಮಿಕ ಸಿದ್ಧಿಗಾಗಿ ಬಲಕ್ಕೆ ಒಂದು ಮೌಲ್ಯವಿದೆ, ಆದರೆ ಅದನ್ನು ಕೇವಲ ಬಲದಿಂದ ಕೈಕೊಳ್ಳಬಹುದು, ಬೇರಾವ ಸಾಧನದ ಆವಶ್ಯಕತೆ ಇಲ್ಲ ಎಂದು ಹೇಳುವುದು ಉಗ್ರ

ಉತ್ಪ್ರೇಕ್ಷೆಯಾಗಿರುತ್ತದೆ. ದೈವೀ ಕೃಪೆ ಒಂದು ಅನ್ವೇಷಣೆ ಅಲ್ಲ, ಅದು ಆಧ್ಯಾತ್ಮಿಕ ಅನುಭವದ ವಾಸ್ತವಿಕ ಸಂಗತಿ. ವಿವೇಕಿಗಳು ಹಾಗೂ ಬಲಿಷ್ಠರಾದವರು ಯಾರನ್ನು ಕೇವಲ ಏನೇನೂ ಅಲ್ಲ ಎಂದು ಪರಿಗಣಿಸುವರೋ ಅಂತಹರು ದೈವೀ ಕೃಪೆಯಿಂದ ಸಿದ್ಧಿಯನ್ನು ಪಡೆದುಕೊಂಡಿದ್ದಾರೆ; ಅನಕ್ಷರಸ್ಥ (illiterate), ಮಾನಸಿಕ ಸಾಮರ್ಥ್ಯವಿಲ್ಲದವನು ಇಲ್ಲವೆ ತರಬೇತು ಪಡೆಯದಿದ್ದವನು, ಚಾರಿತ್ರ್ಯದ ಇಲ್ಲವೆ ಸಂಕಲ್ಪದ ಬಲವಿಲ್ಲದವನು ಇಂತಹರಾಗಿದ್ದವರೂ ಅಭೀಪ್ಸೆಪಟ್ಟಿದ್ದಾರೆ, ಮತ್ತು ಹಠಾತ್ತನೆ ಇಲ್ಲವೆ ತೀವ್ರಗತಿಯಿಂದ ಆಧ್ಯಾತ್ಮಿಕ ಸಿದ್ಧಿಯಲ್ಲಿ ಬೆಳೆದಿದ್ದಾರೆ, ಅದಕ್ಕೆ ಕಾರಣ ಅವರಲ್ಲಿ ನಂಬಿಕೆಯಿತ್ತು ಇಲ್ಲವೆ ಅವರು ನಿಷ್ಕಪಟರಾಗಿದ್ದರು. ಆಧ್ಯಾತ್ಮಿಕ ಇತಿಹಾಸಕ್ಕೆ ಸೇರಿದ ಸರ್ವಸಾಧಾರಣ ಆಧ್ಯಾತ್ಮಿಕ ಅನುಭವ ಕುರಿತು ಅದು ಕೇವಲ ಊಹನದ ವಿಷಯವಾಗಿದೆಯೆಂದು ಚರ್ಚೆ ಮಾಡುವ, ನಿರಾಕರಿಸುವ, ವಾಗ್ವಾದ ನಡೆಸುವ ಕಾರ್ಯವನ್ನು ಏಕೆ ಕೈಕೊಳ್ಳಬೇಕೆಂಬುದು ನನಗೆ ತಿಳಿಯುತ್ತಿಲ್ಲ. ಬಲ ಆಧ್ಯಾತ್ಮಿಕವಾಗಿದ್ದರೆ, ಆಧ್ಯಾತ್ಮಿಕ ಸಿದ್ಧಿಗಾಗಿ ಒಂದು ಸಾಮರ್ಥ್ಯವಾಗಿರುತ್ತದೆ, ನಿಷ್ಕಾಪಟ್ಯ ಇನ್ನೂ ಹೆಚ್ಚಿನ ಸಾಮರ್ಥ್ಯ ಹೊಂದಿರುತ್ತದೆ. ಎಲ್ಲದಕ್ಕಿಂತಲೂ ಅತ್ಯಂತ ಶ್ರೇಷ್ಠ ಸಾಮರ್ಥ್ಯ ದೈವೀ ಕೃಪೆಯದಾಗಿರುತ್ತದೆ. ಮನುಷ್ಯ ನಿಷ್ಕಪಟನಾಗಿದ್ದರೆ ದೀರ್ಘ ನಿಧಾನವಿದ್ದಾಗ್ಯೂ ತಡೆದುಕೊಳ್ಳಲಾಗದ ತೊಂದರೆಗಳಿದ್ದಾಗ್ಯೂ, ಆದ್ಯಂತ ಸಾಗಿ ಹೋಗುತ್ತಾನೆಂದು ಸಂಖ್ಯೆಗಳಲ್ಲಿ ಎಣಿಸಲಾಗದಷ್ಟು ಸಲ ನಾನು ಹೇಳಿದ್ದೇನೆ. ಮತ್ತೆ, ಮತ್ತೆ ದೈವೀ ಕೃಪೆಯ ಬಗ್ಗೆ ಹೇಳಿದ್ದೇನೆ.

**"ಅಹಂ ತ್ವಾ ಸರ್ವ ಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ"**

– ನಿನ್ನನ್ನು ಎಲ್ಲ ಪಾಪ ಹಾಗೂ ಅನಿಷ್ಟಗಳಿಂದ ಮುಕ್ತನನ್ನಾಗಿ ಮಾಡುತ್ತೇನೆ, ಶೋಕಿಸಬೇಡ.

ಎಂಬ ಗೀತೆಯ ವಾಕ್ಯವನ್ನು ನಾನು ಹಲವಾರು ಸಲ ಉದ್ಧರಿಸಿ ಹೇಳಿದ್ದೇನೆ.

**CWSA, 29/172** **– ಶ್ರೀ ಅರವಿಂದರು**

*

ಯೋಗದ ಮಾರ್ಗ ದೀರ್ಘವಾದದ್ದು. ನೆಲದ ಪ್ರತಿಯೊಂದು ಅಂಗುಲ (inch)ವನ್ನು ಬಹಳಷ್ಟು ಪ್ರತಿರೋಧದ ವಿರುದ್ಧ ಗೆದ್ದುಕೊಳ್ಳಬೇಕಾಗುತ್ತದೆ.

ಸಾಧಕನಿಗೆ ಅತ್ಯಂತ ಅವಶ್ಯವಾದ ಗುಣ: ತಾಳ್ಮೆ ಮತ್ತು ಸ್ಥಿರಮನಸ್ಸಿನ ಪಟ್ಟು ಹಿಡಿಯುವಿಕೆ, ಅದರೊಂದಿಗೆ ಎಲ್ಲ ತೊಂದರೆಗಳು, ನಿಧಾನಗಳು ಮತ್ತು ತೋರಿಕೆಯ ವಿಫಲತೆಗಳು ಇವುಗಳಾದ್ಯಂತ ಉಳಿದುಕೊಳ್ಳುವ ನಂಬಿಕೆ.

**CWSA, 29/110** **– ಶ್ರೀ ಅರವಿಂದರು**

*



*Pain is the key that opens*
*the gates of strength, it is the high-road*
*that leads to the city of beatitude.*

- Sri Aurobindo

**RNI No. 22511/1971**
No. of Pages **44 + 4 (Cov. Page)**
KAR Reg No.: RNP/KA/BGS/368/2015-2017
Permitted to Post 10th of Every Month. Reg. Valid till: 31-12-2017
Licensed to Post at BG PSO, Mysore Road, Bengaluru - 560 026

ಶ್ರೀ ಅರವಿಂದ ಸಂಕೀರ್ಣದಲ್ಲಿ ನಿರ್ಮಿಸಲಾಗಿರುವ ಅತಿಥಿ ಗೃಹವು ಈಗಾಗಲೇ ತಿಳಿಸಿರುವಂತೆ ಗುರುಬಂಧುಗಳ ಉಪಯೋಗಕ್ಕಾಗಿ ತೆರೆಯಲಾಗಿದೆ. ಈ ಅತಿಥಿ ಗೃಹದಲ್ಲಿ ತಂಗಲು ಬರುವ ಗುರು–ಬಂಧುಗಳ ಅನುಕೂಲಕ್ಕಾಗಿ ಊಟ ಮತ್ತು ವಸತಿ ವ್ಯವಸ್ಥೆಯನ್ನು ಕೂಡ ಸೂಕ್ತ ದರಗಳಲ್ಲಿ ಅನುವುಗೊಳಿಸಲಾಗಿದೆ. ಶ್ರೀ ಅರವಿಂದ ಸೊಸೈಟಿ ಸದಸ್ಯರುಗಳಿಗೆ ರಿಯಾಯತಿಯಲ್ಲಿ ವಸತಿ ಊಟಗಳ ವ್ಯವಸ್ಥೆ ಇದೆ. ಇದಕ್ಕಾಗಿ ಸದಸ್ಯರು ತಮ್ಮ ಚಾಲ್ತಿಯಲ್ಲಿರುವ ಸದಸ್ಯತ್ವದ ಚೀಟಿಯನ್ನು ತೋರಿಸಬೇಕಾಗುತ್ತದೆ.

**ತತ್ಸಂಬಂಧ ಸಂಪರ್ಕಿಸಬೇಕಾದ ವಿಳಾಸ :**

ಆ್ಯಡ್‌ಮಿನಿಸ್ಟ್ರೇಟಿವ್ ಮ್ಯಾನೇಜರ್
ಶ್ರೀ ಅರವಿಂದ ಸಂಕೀರ್ಣ, ಶ್ರೀ ಅರವಿಂದ ಮಾರ್ಗ
ಜೆ.ಪಿ.ನಗರ ಮೊದಲನೇ ಹಂತ, ಬೆಂಗಳೂರು – 560 078
ದೂರವಾಣಿ : 080 – 22449882, 22459628

Ed. Dr. K.S. Amur, M.Sc., PhD, Pub: Ajit S Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, ‘Sri Aurobindo Marg’,
J.P. Nagar I Phase, Bengaluru - 560 078. Phone: 080 - 22449882.